ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಜನವರಿ 2022 ಮಾಸ ಪತ್ರಿಕೆ

ಸಂಪುಟ/Volume : 44
ಸಂಚಿಕೆ/Issue : 4
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachar | January 2022 | Monthly



## 73 ನೇ ಗಣರಾಜ್ಯೋತ್ಸವದ ಶುಭಾಶಯಗಳು

ಈ ಬಾರಿ ಜನವರಿ 24 ರ ಬದಲಾಗಿ ಜನವರಿ 23 ರಂದು ಸುಭಾಷ್‌ಚಂದ್ರ ಬೋಸ್‌ರವರ ಜನ್ಮ ದಿನಾಚರಣೆಯೊಂದಿಗೆ 73 ನೇ ಗಣರಾಜ್ಯೋತ್ಸವದ ಸಂಭ್ರಮಾಚರಣೆ ಪ್ರಾರಂಭ









A Journal of Karnataka Rajya Madhyamika Shikshaka Sangha (R.)

# ಸಂಪಾದಕೀಯ

"ನವ, ನೂತನ, ಹೊಸ" ಎಂಬ ಪದಗಳನ್ನು ಓದಿದರೆ ನಮಗೆಲ್ಲಾ ಗೊತ್ತಾಗುವುದೇನೆಂದರೆ ಏನೋ ಉತ್ಪತ್ತಿಯಾಗಿರುವುದು ಎಂದು. ಹೊಸ ವರ್ಷವೆಂದು ಆಚರಿಸುವ ಜನವರಿ 1 ರಲ್ಲಿ ಬದಲಾಗುವುದೆಂದರೆ ಕ್ಯಾಲೆಂಡರ್ ಮಾತ್ರ. ಆದರೆ ಭಾರತೀಯರು ಆಚರಿಸುವ ಹೊಸ ವರ್ಷ ಅಥವಾ ಯುಗಾದಿಯ ದಿನಗಳನ್ನು ನೋಡಿದರೆ ಪ್ರಕೃತಿಯೇ ಹೊಸತನವನ್ನು ಕಂಡಿರುತ್ತದೆ. ಆದರೆ ಬ್ರಿಟಿಷರು ಅಥವಾ ವಿದೇಶಿಯರು ಹೊಸ ವರ್ಷವೆಂದು ಕ್ಯಾಲೆಂಡರ್ ಬದಲಾಯಿಸುವುದನ್ನು ನಾವೆಲ್ಲಾ ಬ್ರಿಟಿಷರು ಭಾರತಕ್ಕೆ ಬಂದ ನಂತರದಿಂದ ಆಚರಿಸಲು ಅನುಕರಿಸುತ್ತಿದ್ದೇವೆ. ಇದನ್ನು ಅಂದಾನುಕರಣೆ ಅನ್ನದೇ ಇನ್ನೇನು ಅನ್ನಲು ಸಾಧ್ಯ. ಬೇರೆ ಬೇರೆ ದೇಶಗಳಲ್ಲಿ ಆಗುವ ಕಾಲಗಳ ಬದಲಾವಣೆ ಅವರಿಗೆ ಪ್ರಕೃತಿಯಲ್ಲಿ ಹೊಸತನವನ್ನು ಒಂದೇ ಸಮಯಕ್ಕೆ ತಂದುಕೊಡದಿರದು. ಆದರೆ ಭಾರತದಲ್ಲಿ ಹಾಗೆ ಇಲ್ಲ. ಪ್ರತಿ ವರ್ಷವೂ ವಸಂತ ಮಾಸದಲ್ಲಿ ಪ್ರಕೃತಿಯಲ್ಲಿ ಹೊಸತನ ಮೂಡುತ್ತದೆ. ಮರಗಳಿಂದ ಹಳೆ ಎಲೆಗಳು ಉದುರಿ ಹೊಸ ಚಿಗುರಿನಿಂದ ಮರವಿಡೀ ಕಂಗೊಳಸುತ್ತದೆ. ಇಡೀ ಪ್ರಕೃತಿಯೇ ಶೃಂಗಾರಗೊಂಡಂತೆ ಕಾಣುತ್ತದೆ. ನಾವುಗಳು ಯುಗಾದಿಯನ್ನು ಮನೆಯಲ್ಲಿಯೂ ಆಚರಿಸುವ ರೀತಿಯೂ ವಿಶಿಷ್ಟವಾದದ್ದು. ಮನೆಯನ್ನು ಸ್ವಚ್ಛಗೊಳಿಸಿ, ಮಾವಿನ ತಳಿರು ತೋರಣಗಳನ್ನು ಕಟ್ಟಿ, ಹೊಸ ಬಟ್ಟೆಗಳನ್ನು ತೊಟ್ಟು, ಯುಗದ ಆದಿಯ ದಿನದಂದು ಪಂಚಾಂಗ ಶ್ರವಣ ಮಾಡಿ, ಮನೆಯಲ್ಲಿ ಅನೇಕ ಸಿಹಿಗಳನ್ನು ತಯಾರಿಸಿ, ಎಲ್ಲರೂ ಜೊತೆಯಲ್ಲಿ ಕುಳಿತು ಊಟ ಸವಿದು, ಪ್ರಕೃತಿಯಲ್ಲಿಯ ಹೊಸತನವನ್ನು ಆನಂದಿಸುತ್ತಾ ಹೊಸವರ್ಷವನ್ನು ಆಚರಿಸುತ್ತೇವೆ. ಆದರೆ ಕ್ಯಾಲೆಂಡರ್ ಬದಲಾವಣೆಯ ಹೊಸವರ್ಷವನ್ನು ಹೇಗೆ ಆಚರಿಸುತ್ತಾರೆಂಬುದು ಹೇಳುವುದಕ್ಕೆ ಮುಜುಗರ. ಮಧ್ಯರಾತ್ರಿ ಹನ್ನೆರಡು ಗಂಟೆಗೆ ಕೇಕ್‌ಗಳನ್ನು ಕತ್ತರಿಸಿ, ಮಧ್ಯರಾತ್ರಿಯಲ್ಲಿಯೇ ನಿದ್ದೆ ಮಾಡುವವರನ್ನು ಎಚ್ಚರ ಮಾಡಿ ಹೊಸವರ್ಷದ ಶುಭಾಶಯಗಳನ್ನು ಕೋರುವುದು. ಕುಡಿಯುವುದು, ಕುಣಿಯುವುದು, ಗಲಾಟೆ ಮಾಡಿ ಮುಂದಿನ ಸೂರ್ಯೋದಯವನ್ನು ನೋಡಲಾಗದಷ್ಟು ನಿದ್ದೆ ಮಾಡುತ್ತಾ ಮಲಗಿ ಹೊಸ ಕ್ಯಾಲೆಂಡರ್‌ನ ಹೊಸ ದಿನವನ್ನು ಮಲಗಿಯೇ ಕಳೆಯುವುದೇ ಹೊಸವರ್ಷವಾಗಿ ಬಿಟ್ಟಿದೆ, ಇತ್ತೀಚಿನ ಮಕ್ಕಳಿಗೆ ತಪ್ಪು ಅವರದ್ದು ಎಂದು ಹೇಳದರೆ ಅರ್ಧ ಸತ್ಯವಾಗುತ್ತದೆ. ಮನೆಯಲ್ಲಿ ಇರುವ ಹಿರಿಯರು, ಶಿಕ್ಷಕರು ಮಕ್ಕಳಿಗೆ ಹೊಸ ವರ್ಷವೆಂದರೆ ಯಾವುದು? ಹೊಸ ವರ್ಷವನ್ನು ಏಕೆ ಆಚರಿಸಬೇಕು? ಹೊಸ ವರ್ಷವೆಂದು ಯಾವುದನ್ನು ಕರೆಯಬೇಕು? ಎಂಬುದನ್ನು ತಿಳಿಸಿ ಹೇಳದರೆ ಮತ್ತು ಮಾಡಿ ತೋರಿಸಿದರೆ ಮಕ್ಕಳು ಕಲಿತಾರು.

ಯಾವುದೇ ಹಬ್ಬ ಹರಿದಿನಗಳನ್ನು ನಮ್ಮ ಹಿರಿಯರು ಒಂದು ಧಾರ್ಮಿಕ ಕಾರಣಗಳನ್ನು ಇಟ್ಟುಕೊಂಡು ಆಚರಿಸುತ್ತಿದ್ದರೂ, ಆ ಹಬ್ಬದಲ್ಲಿ ಮಾಡುವ ಆಚರಣೆಗಳು ಮತ್ತು ತಿನ್ನುವ ಅಡುಗೆಯ ಬಗ್ಗೆ ವೈಜ್ಞಾನಿಕವಾಗಿ ಚಿಂತನೆ ನಡೆಸಿದರೆ ಧಾರ್ಮಿಕತೆಯ ಅಡಿಯಲ್ಲಿ ವೈಜ್ಞಾನಿಕ ಕಾರಣಗಳು ಕಂಡುಬರುತ್ತವೆ. ಉದಾಹರಣೆಗೆ ಸಂಕ್ರಾಂತಿಯಂದು ಎಳ್ಳು ಬೆಲ್ಲ ತಿನ್ನುವುದನ್ನು ನಾವೆಲ್ಲಾ ನಮ್ಮ ಹಿರಿಯರು ತಿನ್ನುತ್ತಿದ್ದರು ಆದ್ದರಿಂದ ನಾವು ತಿನ್ನುತ್ತೇವೆ. ಸಂಕ್ರಾಂತಿಯಂದೇ ಎಳ್ಳು ಬೆಲ್ಲವನ್ನು ತಿನ್ನುವುದರಿಂದ ಆ ಸಮಯದಲ್ಲಿ ನಮ್ಮ ದೇಹಕ್ಕೆ ಆಗುವ ಅನುಕೂಲಗಳೇನು? ಎಂದು ನೋಡಲು ಹೋದರೆ ಸೂರ್ಯನು ದಕ್ಷಿಣಾಯನದಿಂದ ಉತ್ತರಾಯಣಕ್ಕೆ ಚಲಿಸುವ ಈ ಕಾಲದಲ್ಲಿ ಸೂರ್ಯನು ತೀಕ್ಷ್ಣವಾಗಿ ಉರಿಯುತ್ತಾನೆ. ಚಳಿಗಾಲದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಮೈ ಚರ್ಮ ಬಿಳಿಚಿಕೊಂಡು ಒಣಗಿದಂತೆ ಕಂಡು ಬರುತ್ತದೆ. ಈ ಸಮಯದಲ್ಲಿ ದೇಹದ ಉಷ್ಣತೆ ಕಾಪಾಡುವಲ್ಲಿ ಎಳ್ಳು ಸಹಕಾರಿ. ಬೆಲ್ಲದಲ್ಲಿಯ ಆ್ಯಂಟಿಆಕ್ಸಿಡೆಂಟ್ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಬೆಲ್ಲದಲ್ಲಿ ಕ್ಯಾಲ್ಸಿಯಂ, ಮೆಗ್ನಿಶಿಯಂ, ಕಬ್ಬಿಣ, ರಂಜಕ ಮುಂತಾದ ಲವಣಗಳು, ಪ್ರೋಟೀನ್ ಹಾಗೂ ಕೊಬ್ಬಿನಾಂಶಗಳಿವೆ. ಲವಣಾಂಶವೂ ಹೆಚ್ಚಾಗಿರುತ್ತದೆ. ಎಳ್ಳು ತಿನ್ನುವುದರಿಂದ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಎಳ್ಳಿನಲ್ಲಿ ಇರುವಂತಹ ಪ್ರೋಟೀನ್ ಸ್ನಾಯುಗಳ ಕೋಶ ಬಲಪಡಿಸುವುದು ಮಾತ್ರವಲ್ಲದೆ ಕೋಶಗಳ ಸಂಪೂರ್ಣ ಬೆಳವಣಿಗೆ, ಶಕ್ತಿಯ ಮಟ್ಟ, ಆರೋಗ್ಯವನ್ನು ಸುಧಾರಿಸುವುದು. ಬೆಲ್ಲ ಜೀರ್ಣಕ್ರಿಯೆಗೆ ಸಹಾಯ ಮಾಡುವುದು. ಮಲಬದ್ಧತೆ ಸಮಸ್ಯೆ ಹೋಗಲಾಡಿಸುವಲ್ಲಿ ಎಳ್ಳು-ಬೆಲ್ಲ ಸಹಕಾರಿ. ಈ ರೀತಿಯಾಗಿ ಎಲ್ಲಾ ಹಬ್ಬಗಳ ಹಿಂದಿರುವ ವೈಜ್ಞಾನಿಕ, ಧಾರ್ಮಿಕ ಮತ್ತು ಸಾಮಾಜಿಕ ಕಾರಣಗಳನ್ನು ತಿಳಿದುಕೊಂಡು, ಮಕ್ಕಳಿಗೆ ಸವಿವರವಾಗಿ ತಿಳಿಸಿದರೇ ಒಳ್ಳೆಯದಲ್ಲವೇ?

– – – – –

ನಮ್ಮೆಲ್ಲಾ ಪ್ರೀತಿಯ ಓದುಗರಿಗೆ ಜನವರಿ 12, ಸ್ವಾಮಿ ವಿವೇಕಾನಂದರ ಜಯಂತಿಯಿಂದ ಜನವರಿ 23, ಸುಭಾಷ್‌ಚಂದ್ರಬೋಸ್‌ರವರ ಜಯಂತಿಯವರೆಗೆ ಆಚರಿಸುವ ಕರ್ತವ್ಯಬೋಧ ದಿನದ ಶುಭಾಶಯಗಳು. ಎಲ್ಲಾ ಜಿಲ್ಲೆಯ ಪದಾಧಿಕಾರಿಗಳು ತಾಲ್ಲೂಕು ಹಂತದ ಪದಾಧಿಕಾರಿಗಳೊಂದಿಗೆ ಚರ್ಚಿಸಿ ಪ್ರತಿ ಜಿಲ್ಲೆಯಲ್ಲೂ, ಪ್ರತಿ ತಾಲ್ಲೂಕಿನಲ್ಲೂ ಕರ್ತವ್ಯಬೋಧ ದಿನವನ್ನು ಆಚರಿಸಿ, ವರದಿಯನ್ನು ದಿನಾಂಕ 05.02.2022 ರೊಳಗೆ ಕೇಂದ್ರ ಕಛೇರಿಯ ಈ-ಮೇಲ್ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

– – – – –

ಎಲ್ಲಾ ಆತ್ಮೀಯ ಓದುಗರಿಗೆ 73 ನೇ ಗಣರಾಜ್ಯೋತ್ಸವದ ಶುಭಾಶಯಗಳು.

**ಸಂಪಾದಕ**

## ಪರಿವಿಡಿ


- ಪ್ರಭಾವ – ಪ್ರಯೋಗ – ಅಸ್ತಿತ್ವ 3
- ಮಕ್ಕಳಲ್ಲಿ ಶಿಸ್ತು 4
- ವಿಭಜನೆಯ ಘೋರ ದುರಂತ 5
- NEP-2020 ರಲ್ಲಿ ಬರುವ FLN ಅನ್ನುವುದು ಏನು? 6
- ವರ್ಗಾವಣೆ ಎಂಬ ಪ್ರಹಸನಕ್ಕೆ ತಾರ್ಕಿಕ ಅಂತ್ಯ ಎಂದು? 7
- ಶಿಕ್ಷಕ ಸಮ್ಮಾನ – ವರದಿ 8
- ವಿದ್ಯಾರ್ಥಿ ಮಿತ್ರ 10
- ನನ್ನ ಶಾಲೆ ನನ್ನ ತೀರ್ಥಕ್ಷೇತ್ರ 11

# ಪ್ರಭಾವ – ಪ್ರಯೋಗ – ಅಸ್ತಿತ್ವ

**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು



ಪ್ರಭಾವ, ಪ್ರಯೋಗ, ಅಸ್ತಿತ್ವ– ಪ್ರಸ್ತುತ ಲೇಖನದಲ್ಲಿ ಈ ಮೂರು ಪದಗಳನ್ನಿಟ್ಟುಕೊಂಡು ಸ್ವಾತಂತ್ರ್ಯ ದಿನಾಚರಣೆಯ ಅಮೃತೋತ್ಸವದ ಕುರಿತು ಚಿಂತನೆ ಮಾಡುವ ಪ್ರಯತ್ನವಿದು.

ಕೇವಲ ವ್ಯಾಪಾರದ ಉದ್ದೇಶದೊಂದಿಗೆ ಭಾರತದ ನೆಲದಲ್ಲಿ ಕಾಲಿಟ್ಟಿತ್ತು, ಈಸ್ಟ್ ಇಂಡಿಯಾ ಕಂಪೆನಿ. ಕ್ರಮೇಣ ಇಲ್ಲಿನ ಸಂಪನ್ಮೂಲಗಳ ಆಕರ್ಷಣೆ, ಆಡಳಿತ ವ್ಯವಸ್ಥೆಗಳಲ್ಲಿನ ಆಂತರಿಕ ಅಭದ್ರತೆ ಎಲ್ಲದರ ಕಾರಣದಿಂದ ಕಂಪೆನಿಗೆ ಅಧಿಕಾರದ ಆಕಾಂಕ್ಷೆ ಬಲಗೊಳ್ಳತೊಡಗಿತ್ತು. ಆ ದಿಕ್ಕಿನಲ್ಲಿ ಚಟುವಟಿಕೆಗಳನ್ನು ಪ್ರಾರಂಭಿಸಿತು. ಅನೇಕ ದೇಶಭಕ್ತರ ಪ್ರತಿಭಟನೆಗಳನ್ನು ಎದುರಿಸುತ್ತಾ, ಹತ್ತಿಕ್ಕುತ್ತಾ ಬಂದು, 1857 'ಸಿಪಾಯಿದಂಗೆ' ಹೋರಾಟದ ನಂತರದಲ್ಲಿ 1858ರಿಂದ ಬ್ರಿಟಿಷರು ನೇರವಾಗಿ ಭಾರತದಲ್ಲಿ ಆಡಳಿತವನ್ನು ಸಮಗ್ರ ರೀತಿಯಿಂದ ವಹಿಸಿಕೊಳ್ಳುವಂತಾಗಿತ್ತು. ಅದರ ಸಂಪೂರ್ಣ ಅಧಿಕಾರವನ್ನು ಬ್ರಿಟಿಷ್ ಗವರ್ನರ್ ಜನರಲ್‌ಗೆ ನೀಡಲಾಗಿತ್ತು. ಮುಂದೆ 1947ವರೆಗೆ ದೇಶ ಹೀಗೆ ಪರಕೀಯರ ಆಳ್ವಿಕೆಯನ್ನೇ ಅನುಭವಿಸುವಂತಾಯಿತು.

ಈ ಅವಧಿಯಲ್ಲಿ ಬ್ರಿಟಿಷರು ದೇಶದಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಅನೇಕ ಬದಲಾವಣೆಗಳನ್ನು ತಂದರು. ಆರ್ಥಿಕ ಕ್ಷೇತ್ರದಲ್ಲಿ ಕೈಗಾರಿಕಾ ಕ್ರಾಂತಿಯ ಕಾರಣದಿಂದ ತಂತ್ರಜ್ಞಾನದಲ್ಲಿ ಬೆಳವಣಿಗೆಯಾಯಿತು. ಅದರಿಂದ ರೈಲ್ವೆಗಳು, ರಸ್ತೆಗಳು, ಸೇತುವೆಗಳು, ದೇಶದ ಅನೇಕ ಕಡೆಗಳಲ್ಲಿ ಕಾರ್ಖಾನೆಗಳು ಹೀಗೆ ನಿರ್ಮಾಣಕಾರ್ಯಗಳು ನಡೆದುವು. ಪರಿಣಾಮವಾಗಿ ದೇಶದ ಸಾಮಾಜಿಕ ವ್ಯವಸ್ಥೆಗಳಲ್ಲಿ ಗಮನಾರ್ಹವಾದ ಬದಲಾವಣೆಗಳಾದುವು. ಫಲವಾಗಿ ಜನರ ಜೀವನಶೈಲಿಯೂ ಬ್ರಿಟಿಷರ ಜೀವನ ಶೈಲಿಯ ಪ್ರಭಾವದಿಂದ ಬದಲಾಯಿತು. ಧಾರ್ಮಿಕವಾಗಿ ಕೂಡ ಅದೆಷ್ಟೋ ಬದಲಾವಣೆಗಳನ್ನು ಹೇರಲಾಯಿತು. ಸಾಮಾಜಿಕವಾದ ಆಚರಣೆಗಳಲ್ಲಿಯೂ ಸುಧಾರಣಾತ್ಮಕ ಬದಲಾವಣೆಗಳನ್ನು ತರಲಾಯಿತು. ತತ್ಸಂಬಂಧಿತವಾದ ಪ್ರಯೋಗಗಳು ಸ್ಥಳೀಯರ ಬದುಕಿನಲ್ಲಿ ಕೆಲವು ಸುಧಾರಣೆಗಳನ್ನು ತಂದುವು. ಇವೆಲ್ಲ ಸಕಾರಾತ್ಮಕ ಅಂಶಗಳೆನಿಸಿಕೊಂಡುವು. ಆದರೆ, ಭಾರತದ ಶೈಕ್ಷಣಿಕ ಕ್ಷೇತ್ರದ ಮೇಲೆ ಬ್ರಿಟಿಷರು ಮಾಡಿದ ಪ್ರಹಾರ ಮಾತ್ರ ಖಂಡನಾರ್ಹ. ದೇಶವನ್ನು ಸಂಪೂರ್ಣವಾಗಿ ತನ್ನ ಹತೋಟಿಯಲ್ಲಿ ತಂದುಕೊಳ್ಳಲು ಇಲ್ಲಿನ ಶಿಕ್ಷಣ ವ್ಯವಸ್ಥೆಯಲ್ಲಿಯೇ ಆಮೂಲಾಗ್ರ ಬದಲಾವಣೆಯನ್ನು ತರಲು ಪ್ರಯತ್ನಿಸಿ ಯಶಸ್ವಿಯೂ ಆದುದು, ಇಂದಿಗೂ ಅದರ ಅನುಸರಣೆ ಉಳಿದು ಕೊಂಡಿರುವುದು ವಿಷಾದನೀಯ. ಇದಕ್ಕೆ ಕಾರಣ ಬ್ರಿಟಿಷರು ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ತಂದ ಬಹುದೊಡ್ಡ ಬದಲಾವಣೆ. ಅದೇ ಭಾರತೀಯ ಶಿಕ್ಷಣ ವ್ಯವಸ್ಥೆಯನ್ನೇ ಕಿತ್ತುಹಾಕಿ ಪಾಶ್ಚಿಮಾತ್ಯ ಶಿಕ್ಷಣ ಕ್ರಮವನ್ನು ಜಾರಿಗೆ ತಂದದ್ದು.

ಥಾಮಸ್ ಬ್ಯಾಬಿಂಗ್‌ಟನ್ ಮೆಕಾಲೆ ಎಂಬ ಬ್ರಿಟಿಷ್ ಇತಿಹಾಸಜ್ಞ ಮತ್ತು ರಾಜಕಾರಣಿಯ ದುರಾಲೋಚನೆಯಿಂದ ಕೂಡಿದ ಸಲಹೆಯೇ ಇದಕ್ಕೆ ಕಾರಣ. ಶೈಕ್ಷಣಿಕವಾಗಿಯೂ, ಸಾಂಸ್ಕೃತಿಕವಾಗಿಯೂ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಭಾರತವು ಸಂಪೂರ್ಣವಾಗಿ ಬ್ರಿಟಿಷರ ನಿಯಂತ್ರಣಕ್ಕೆ ಬರಬೇಕಾದರೆ ಸಂಸ್ಕೃತಿಯ ಭದ್ರಕೋಟೆಯನ್ನೇ ದುರ್ಬಲಗೊಳಿಸುವುದೇ ಏಕೈಕ ಮಾರ್ಗವೆಂಬ ಸತ್ಯಾಂಶ ಅವನಿಗೆ ಅರಿವಾಗಿತ್ತು. ಆದುದರಿಂದ ಅದನ್ನು ಕಾರ್ಯಗತಗೊಳಿಸಲು ಸರ್ವಾಂಗೀಣ ವ್ಯಕ್ತಿತ್ವ ವಿಕಾಸಗೊಳಿಸುವ ಭಾರತೀಯ ಶಿಕ್ಷಣ ಪದ್ಧತಿಯನ್ನೇ ತಳ್ಳಿಹಾಕಿ ಕೇವಲ ವ್ಯಾವಹಾರಿಕ ಬೋಧೆ ನೀಡುವ ಪಾಶ್ಚಿಮಾತ್ಯ ಶಿಕ್ಷಣವನ್ನು ಅನುಷ್ಠಾನಕ್ಕೆ ತರುವ ಸಲಹೆಯನ್ನು ನೀಡಿ ಅದು ವ್ಯವಸ್ಥೆಯಲ್ಲಿ ಬಂದು ಇಂದಿಗೂ ಉಳಿದುಕೊಂಡಿರುವುದನ್ನು ಕಾಣುತ್ತಿದ್ದೇವೆ.

ಬ್ರಿಟಿಷರು ತಂದ ಹೊಸ ಶಿಕ್ಷಣ ವ್ಯವಸ್ಥೆಯಿಂದ ಜಾಗತಿಕವಾಗಿ ಹೆಚ್ಚುಹೆಚ್ಚಾಗಿ ತೆರೆದುಕೊಳ್ಳಲು ಸಾಧ್ಯವಾದುದೇನೋ ನಿಜ. ಅಂತಾರಾಷ್ಟ್ರೀಯ ಭಾಷೆಯಾದ ಆಂಗ್ಲಭಾಷೆಯ ಸಾಹಿತ್ಯದ ಪ್ರಕಾರಗಳು, ಇಲ್ಲಿನ ಚಿಂತನಾ ವಿಧಾನ ಎಲ್ಲವೂ ಪ್ರಭಾವಬೀರಿ ನಮ್ಮಲ್ಲಿ ವೈಚಾರಿಕ ಕ್ರಾಂತಿಯನ್ನೇ ಉಂಟುಮಾಡಿದುವು. ಆದರೆ, ಎಷ್ಟೇ ಪ್ರಭಾವಕ್ಕೊಳಗಾದರೂ ನಮ್ಮದೇ ಆದ ಅಸ್ತಿತ್ವವೊಂದಿದೆಯೆಂಬುದನ್ನು ಮರೆಯಬಾರದಲ್ಲವೇ? ಪ್ರತಿಯೊಂದು ಭಾಷೆ, ಸಾಹಿತ್ಯ, ಸಂಸ್ಕೃತಿಗೂ ಅದರದ್ದೇ ಆದ ಮೂಲ ಲಕ್ಷಣಗಳಿರುತ್ತವೆ. ಅವುಗಳನ್ನು ಉಳಿಸಿಕೊಂಡು ಹೊಸತನಕ್ಕೆ ತೆರೆದುಕೊಳ್ಳುವುದು ಬುದ್ಧಿವಂತಿಕೆಯ ಬೆಳವಣಿಗೆಯ ಲಕ್ಷಣ. ಆದರೆ, ಸ್ವಾತಂತ್ರ್ಯದ ಅಮೃತೋತ್ಸವ ವರ್ಷವನ್ನು ಕಾಣುತ್ತಿದ್ದರೂ ಆಂಗ್ಲಭಾಷೆಯ ವ್ಯಾಮೋಹ, ಅವರ ಸಂಸ್ಕೃತಿ ಅದೆಷ್ಟು ಆವರಿಸಿದೆಯೆಂಬುದನ್ನು ಕಂಡಾಗ ವಿಷಾದವುಂಟಾಗುತ್ತದೆ. ಮಮ್ಮಿ, ಡ್ಯಾಡಿ ಸಂಸ್ಕೃತಿಯಿಂದ ಇನ್ನೂ ಅದೆಷ್ಟೋ ಮಂದಿ ಹೊರಬಂದಿಲ್ಲ. ಮಾತೃಭಾಷೆಯನ್ನು ಮಾತನಾಡಲು ಕಲಿಯದಿದ್ದರೂ ಅವರಿಗೆ ಚಿಂತೆಯಿಲ್ಲ, ಬೇಸರವಿಲ್ಲ. ಆಂಗ್ಲಭಾಷೆಯ ತಪ್ಪು ಪ್ರಯೋಗಗಳನ್ನು ಮಾಡಿದರೂ ಅದವರಿಗೆ ಪ್ರತಿಷ್ಠೆಯ ಕುರುಹು. ಆಂಗ್ಲಭಾಷೆಯ ಪತ್ರಿಕೆಯ ಪಠನವೇ ಅವರಿಗೆ ಬೇಕು. ಮಾತೃಭಾಷಾ ಪತ್ರಿಕೆ ವರ್ಜ್ಯ. ನಮ್ಮ ಸಾಹಿತ್ಯ ಸಂಪತ್ತಿನ ಅರಿವೂ ಅವರಿಗೆ ಇಲ್ಲ. ಆಂಗ್ಲಭಾಷಾಕಲಿಕೆಯಿಲ್ಲದೆ ಬದುಕೇ ಇಲ್ಲವೆಂಬಷ್ಟು ದಾಸ್ಯಭಾವ. ಶಾಲೆಗಳಲ್ಲಂತೂ ಪಾಠಕ್ಕೂ, ಆಟಕ್ಕೂ ಆಂಗ್ಲಭಾಷೆಯ ಮಾಧ್ಯಮವೇ ಬೇಕು.

ಮನೆಯಲ್ಲಿ ಹಿರಿಯರಾದವರು ಮಕ್ಕಳಿಗೆ ನಮ್ಮ ಭಾಷೆ, ನೆಲ, ರಾಜ್ಯ, ದೇಶ, ಸಂಸ್ಕೃತಿ ಎಲ್ಲದರ ಕುರಿತು ಅಭಿಮಾನವನ್ನು ಮೂಡಿಸದಿದ್ದರೆ ಅದೊಂದು ಪರಂಪರೆಯಾಗಿ ಮುಂದುವರಿಯುವುದು ಹೇಗೆ? ಪರಭಾಷಾ ಸಂಸ್ಕೃತಿಗೆ, ಸಂಪತ್ತಿಗೆ, ಜೋತುಬೀಳುವ ದಾಸ್ಯಭಾವವೇ ಗಟ್ಟಿಯಾಗುತ್ತದೆ. ಹೀಗಾದರೆ, ಸ್ವತಂತ್ರ ಭಾರತದ ಸ್ವತಂತ್ರಪ್ರಜೆಗಳೆನಿಸಿಕೊಳ್ಳಲು ಸಾಧ್ಯವೇ? ಸ್ಥಿತಿಯಿಂದ ಹೊರಬರಲು ಸಾಧ್ಯವಿಲ್ಲವೇ? ಅಥವಾ ಮನಸ್ಸಿಲ್ಲವೇ? ನೂರಾರು ವರ್ಷಗಳ ಗುಲಾಮೀ ಸ್ಥಿತಿಯಿಂದ ಗಾಂಧೀಜಿ 'ಸ್ವರಾಜ್ಯ' ನಮ್ಮದಾಗಬೇಕು ಎಂದು ಅಂದಿನ ರಾಷ್ಟ್ರನಾಯಕರೆಲ್ಲ ಕಂಡ ಕನಸಾದರೂ ಎಂತಹುದಾಗಿತ್ತು? ಅದು ನಮ್ಮದೇ ರಾಜ್ಯ, ನಮ್ಮದೇ ದೇಶ, ನಮ್ಮದೇ ಆಡಳಿತ, ನಮ್ಮ ಭಾರತೀಯತೆ, ನಮ್ಮ ಸಮಾಜದ ಮೌಲ್ಯಗಳು ಎಲ್ಲವನ್ನೂ ಉಳಿಸಿಕೊಂಡು ಸರ್ವಸ್ವತಂತ್ರ, ಆತ್ಮನಿರ್ಭರ ದೇಶವೆನಿಸಿಕೊಳ್ಳುವ ಕನಸಾಗಿತ್ತು. ಈ ಕನಸನ್ನು ನನಸಾಗಿಸುವ ಗುರಿ ಪ್ರತಿಯೊಂದು ಮನಸ್ಸಿನಲ್ಲಿಯೂ, ಪ್ರತಿಕ್ಷಣದಲ್ಲಿಯೂ ಜಾಗೃತವಾಗಿರಬೇಕಲ್ಲದೆ, ಅನ್ಯ ಸಂಸ್ಕೃತಿಗೆ ಮರುಳಾಗುವ, ಅದು ಬಿಟ್ಟರೆ ಬೇರೆ ಮಾರ್ಗವಿಲ್ಲವೆನ್ನುವ ದೀನಾವಸ್ಥೆ ನಮ್ಮದಾಗಬಾರದು. ವಿಶ್ವಕ್ಕೇ ಒಂದು ಮಾದರಿಯಾದ ಸಂಸ್ಕೃತಿಯನ್ನು ನೀಡಿದ ದೇಶ ನಮ್ಮದು. ನಮ್ಮ ಆ ಮೂಲ ಸಂಸ್ಕೃತಿಯ ಅಸ್ತಿತ್ವವನ್ನು, ಅದರ ಸತ್ತ್ವವನ್ನು ಉಳಿಸಿಕೊಂಡೇ ಸ್ಪರ್ಧಾತ್ಮಕ ಜಗತ್ತಿನಲ್ಲಿ ಹೆಮ್ಮೆಯಿಂದ ತಲೆಯೆತ್ತಿ ನಿಲ್ಲುವಂತಾಗಬೇಕು. ಯಾವುದೇ ಪ್ರಭಾವಕ್ಕೆ, ಪ್ರಯೋಗಕ್ಕೆ ಒಳಗಾದರೂ, ನಮ್ಮತನದ, ಸ್ವಂತಿಕೆಯ ಅಸ್ತಿತ್ವದ ಭದ್ರಬುನಾದಿಯ ಮೇಲೇ ನಮ್ಮ 'ಇರುವಿಕೆ' ಎಂಬುದನ್ನು ಮರೆಯಬಾರದು. ನಮ್ಮ ನೆಲದಲ್ಲಿ ಬಾಳಿದ ಮಹಾನ್ ಚೈತನ್ಯಗಳ ಆದರ್ಶಗಳು ನಮಗೆ ಮಾರ್ಗಸೂಚಿಯೆಂಬುದನ್ನು ಮರೆಯಬಾರದು. 'ಸ್ವಾತಂತ್ರ್ಯ'ವನ್ನು 'ಸ್ವರಾಜ್ಯ'ವನ್ನಾಗಿಸುವ ಪ್ರಯತ್ನವನ್ನು ಅಮೃತೋತ್ಸವದ ವರ್ಷದಲ್ಲಾದರೂ ಮಾಡೋಣ. ●

# ಮಕ್ಕಳಲ್ಲಿ ಶಿಸ್ತು

ಲಕ್ಷ್ಮೀಸಿಂಗ್ ಬಿ.
ಶೈಕ್ಷಣಿಕ ಸಮಾಲೋಚಕರು, ಲೈಫ್‌ಕೋಚ್
ಸಂಪನ್ಮೂಲ ವ್ಯಕ್ತಿ (ಗಣಿತ), ಗಂಗಾನಗರ,
ಬೆಂಗಳೂರು –560 032
ದೂರವಾಣಿ ಸಂಖ್ಯೆ: 9980033636



ಜೀವನ ಮೌಲ್ಯಗಳಲ್ಲಿ ಶಿಸ್ತು ಅತಿ ಮುಖ್ಯ ಮತ್ತು ಅವಶ್ಯಕ. ನಮ್ಮ ದೈನಂದಿನ ದಿನಚರಿಯಲ್ಲಿ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಿದರೆ ಜೀವನದ ಯಶಸ್ಸು ಕಟ್ಟಿಟ್ಟ ಬುತ್ತಿ.

## ಕ್ರಮಬದ್ಧ ಮತ್ತು ವ್ಯವಸ್ಥಿತ ರೀತಿಯೇ ಶಿಸ್ತು

ಬೆಳಿಗ್ಗೆ ಏಳುವುದರಿಂದ ಪ್ರಾರಂಭವಾಗಿ ರಾತ್ರಿ ಮಲಗುವವರೆಗೂ ಸಮಯಕ್ಕೆ ಸರಿಯಾಗಿ ಮತ್ತು ಕ್ರಮಬದ್ಧವಾದ ಕೆಲಸಗಳನ್ನು ಮಾಡುವ ರೂಢಿಯನ್ನು ನಾವು **"ಶಿಸ್ತು"** ಎಂದು ಕರೆಯಬಹುದು.

ಶಿಸ್ತಿನ ಅರ್ಥ ಬಹಳ ವ್ಯಾಪಕವಾಗಿದೆ. ಜೀವನದ ಬೆಳವಣಿಗೆಗೆ ನಮ್ಮ ಆಹಾರ ಕ್ರಮ ಮಾಡುವ ಕೆಲಸ ಸಮಯ ಪರಿಪಾಲನೆ ನಮ್ಮ ನಡವಳಿಕೆ ಮತ್ತು ನಮ್ಮ ವ್ಯವಹಾರಗಳು ಮುಖ್ಯ ಅಂಶಗಳಾಗುತ್ತವೆ. ಇವುಗಳೆಲ್ಲವೂ ಸರಿಯಾದ ಕ್ರಮದಲ್ಲಿ ನಡೆಯಬೇಕಿದ್ದರೆ "ಶಿಸ್ತು" ಅತಿ ಅವಶ್ಯಕವಾಗಿದೆ. ಶಿಸ್ತಿನಿಂದಲೇ ಜೀವನದ ಏಳಿಗೆ ಸಾಧ್ಯ.

"ಮನೆಯೇ ಮೊದಲ ಪಾಠಶಾಲೆ ಜನನಿ ತಾನೆ ಮೊದಲ ಗುರುವು" ಎಂಬಂತೆ ಮಕ್ಕಳಲ್ಲಿ ಶಿಸ್ತು ಮನೆಯಿಂದಲೇ ರೂಢಿಯಾಗಬೇಕು. ಶಿಸ್ತಿಗೂ ನಾವು ಬೆಳೆದು ಬರುವ ಪರಿಸರಕ್ಕೂ ಬಹಳ ಹತ್ತಿರದ ನಂಟಿದೆ.

ಮಕ್ಕಳು ತಮ್ಮ ಪೋಷಕರ ಪ್ರತಿದಿನದ ನಡವಳಿಕೆಗಳನ್ನು ಮತ್ತು ತಮ್ಮ ಸುತ್ತಮುತ್ತಲಿನ ಆಗು ಹೋಗುಗಳನ್ನು ಗಮನಿಸಿ ಅದರಿಂದ ಪ್ರೇರೇಪಿತರಾಗುತ್ತಾರೆ. ತಾವೂ ಕೂಡ ಅದನ್ನೇ ಅನುಕರಣೆ ಮಾಡತೊಡಗುತ್ತಾರೆ. ಹೀಗೆ "ಶಿಸ್ತು" ಅನುಕರಣೆಯಿಂದಲೂ ಮತ್ತು ಅಭ್ಯಾಸದಿಂದಲೂ ಜೀವನದಲ್ಲಿ ಅಳವಡಿಕೆಯಾಗುತ್ತದೆ. ಆದ್ದರಿಂದ ಮಕ್ಕಳಿಗೆ ವಿನಯ, ಸಮಯಪ್ರಜ್ಞೆ ಮುಂತಾದ ವ್ಯವಸ್ಥಿತ ಕ್ರಮಗಳನ್ನು ಕಲಿಯಲು ಮನೆಯೇ ಮೊದಲ ಮೆಟ್ಟಿಲಾಗಬೇಕು.

ಇನ್ನು ಗುರುಗಳು ಅಂದರೆ ಶಿಕ್ಷಕರಿಗೆ ಮಕ್ಕಳಲ್ಲಿ ಶಿಸ್ತನ್ನು ಮೂಡಿಸುವಲ್ಲಿ ಬಹುದೊಡ್ಡ ಪಾಲಿದೆ. ಸಮಾಜಲ್ಲಿ ಎಲ್ಲರ ಆದರ್ಶ ವ್ಯಕ್ತಿ ಎಂದರೆ ಶಿಕ್ಷಕ. ಎಲ್ಲಾ ಉತ್ತಮ ಗುಣಗಳು ಅವರಲ್ಲಿ ಇರಬೇಕು ಎಂದು ಜನ ಬಯಸುತ್ತಾರೆ ಮತ್ತು ಇದೆ ಎಂದು ಭಾವಿಸುತಾರೆ ಕೂಡಾ. ಬಹುಪಾಲು ಜೀವನ ಮೌಲ್ಯಗಳಾದ ಸಹಕಾರ, ವಿನಯ, ಸೌಜನ್ಯ, ನಿಷ್ಠೆ ಮತ್ತು ಅತಿಮುಖ್ಯವಾಗಿ "ಶಿಸ್ತು" ಮುಂತಾದ ಅಂಶಗಳನ್ನು ಮಕ್ಕಳು ಬಹು ಮಟ್ಟಿಗೆ ಶಾಲೆಗಳಲ್ಲಿ ಕಲಿಯುತ್ತಾರೆ. ಶಿಕ್ಷಕರು ಮಕ್ಕಳ ಬಾಳಿಗೆ ಬೆಳಕು ತೋರುವ ಮಾರ್ಗದರ್ಶಕರಾಗಿರುತ್ತಾರೆ.

ಶಾಲೆಯಲ್ಲಿ ಮಕ್ಕಳು ಎಲ್ಲಾ ರೀತಿಯಿಂದಲೂ ತಮ್ಮ ತಮ್ಮ ಶಿಕ್ಷಕರ ಅನುಕರಣೆ ಬಹಳ ಮಟ್ಟಿಗೆ ಮಾಡುತ್ತಾರೆ. ತಮ್ಮ ಶಿಕ್ಷಕರ ಉಡುಪು ಧರಿಸುವ ರಿವಾಜು, ಮಾತನಾಡುವ ಶೈಲಿ, ಸಮಯ ಪರಿಪಾಲಿಸುವ ಬಗೆ, ಅವರ ನಡೆ ನುಡಗಳನ್ನು ಚಾಚೂ ತಪ್ಪದೆ ಅನುಕರಿಸಲು ಯತ್ನಿಸುತ್ತಾರೆ. ಆದ್ದರಿಂದ ಶಿಕ್ಷಕ ಕೇವಲ ಪಠ್ಯಪುಸ್ತಕಕ್ಕೆ ಸೀಮಿತವಾಗದೆ, ಮಕ್ಕಳಲ್ಲಿ ಶಿಸ್ತಿನ ಮೌಲ್ಯದ ಅರಿವು ಮೂಡಿಸುವುದು ಅವಶ್ಯಕವಾಗಿದೆ.

ಶಿಸ್ತಿನಲ್ಲಿ ಹಲವು ವಿಧಗಳಿವೆ. ಅದರಲ್ಲಿ ಕೆಲವು ಹೀಗಿವೆ. ಮೊದಲನೆಯಾದಾಗಿ "ವೈಯಕ್ತಿಕ ಶಿಸ್ತು" ಇದರಲ್ಲಿ ಶಾರೀರಿಕ ಶಿಸ್ತು ಮತ್ತು ಮಾನಸಿಕ ಶಿಸ್ತು ಮುಖ್ಯ ಅಂಶಗಳಾಗಿವೆ.

ಪ್ರತಿನಿತ್ಯ ನಿಗದಿತ ಸಮಯಕ್ಕೆ ಏಳುವುದು, ವ್ಯಾಯಾಮ ಅಥವಾ ವಾಯುವಿಹಾರ ಮಾಡುವುದು, ಹಿತಮಿತವಾದ ಆಹಾರವನ್ನು ಸಮಯಕ್ಕೆ ಸರಿಯಾಗಿ ಸೇವಿಸುವುದು, ವೇಳಾಪಟ್ಟಿ ತಯಾರಿಸಿ, ಅದರಂತೆ ಅಂದುಕೊಂಡ ಕೆಲಸಗಳನ್ನು ಮಾಡಿ ಮುಗಿಸುವುದು ಇತ್ಯಾದಿಗಳು ಶಿಸ್ತು ಪಾಲಿಸುವುದರಿಂದ ನಮ್ಮ ಶಾರೀರಿಕ ಸ್ವಾಸ್ಥ್ಯ ಚೆನ್ನಾಗಿರುತ್ತದೆ.

ಇನ್ನು ಮಾನಸಿಕ ಶಿಸ್ತಿನ ಆರೋಗ್ಯಕರ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದು ಸದಭಿರುಚಿಯ ಚಿಂತನೆಗಳನ್ನು ನಡೆಸುವುದು ಮತ್ತು ಧ್ಯಾನ ಮಾಡುವುದು ಮುಂತಾದವುಗಳನ್ನು ಅಭ್ಯಾಸ ಮಾಡಿಕೊಳ್ಳಬೇಕು. ಇವೆರಡಲ್ಲಿ ಏರುಪೇರು ಆದರೆ ನಮ್ಮ ಜೀವನವೇ ಅಸ್ವಸ್ಥವಾಗುತ್ತದೆ. ಜೀವನದ ಬೇಕು–ಬೇಡಗಳಿಗೆ ಕಡಿವಾಣ ಹಾಕಿ, ಆರ್ಥಿಕ ಶಿಸ್ತನ್ನು ಕೂಡ ಪಾಲಿಸಬಹುದು. (ಇದರ ಜವಾಬ್ದಾರಿ ಮುಖ್ಯವಾಗಿ ಪೋಷಕರದ್ದಾಗಿದೆ) ಈ ಶಿಸ್ತುಗಳನ್ನು ಸಮರ್ಪಕವಾಗಿ ಮಕ್ಕಳಿಗೆ ತಿಳಿಸಿ ಕೊಟ್ಟರೆ ಖಂಡಿತ ಆ ಮಕ್ಕಳು ಜೀವನದಲ್ಲಿ ಮುನ್ನಡೆಯುತ್ತಾರೆ.

ಇದಕ್ಕೆ ಉದಾಹರಣೆಗಳಾಗಿ ಸರ್.ಎಂ.ವಿಶ್ವೇಶ್ವರಯ್ಯ. ಅಬ್ದುಲ್‌ಕಲಾಂ, ವಿವೇಕಾನಂದ, ಗಾಂಧೀಜಿ ಮುಂತಾದ ಮಹನೀಯರ ಜೀವನ ಕ್ರಮಗಳನ್ನು, ಅವರು ಪಾಲಿಸುತ್ತಿದ್ದ ಶಿಸ್ತನ್ನು ಮಕ್ಕಳಿಗೆ ತಿಳಿಸಿಕೊಡಬೇಕು.

ಇನ್ನೊಂದು ಬಹು ಮುಖ್ಯವಾದ ಶಿಸ್ತಿದೆ. ಅದು "ಸಾಮಾಜಿಕ ಶಿಸ್ತು" ಈ ಶಿಸ್ತಿನಿಂದ ಸಮಾಜದಲ್ಲಿ ಗೌರವದಿಂದ ಬಾಳಲು ಸಾಧ್ಯವಾಗುತ್ತದೆ.

ಗುರು ಹಿರಿಯರೊಂದಿಗೆ ನಡೆದುಕೊಳ್ಳುವ ರೀತಿ, ಸಭೆ ಸಮಾರಂಭಗಳಲ್ಲಿ ಪಾಲಿಸಬೇಕಾದ ನೀತಿ ನಿಯಮಗಳು, ಸಭ್ಯ ಉಡುಗೆ–ತೊಡುಗೆ, ಇತರರೊಂದಿಗೆ ವರ್ತಿಸುವ ರೀತಿ ಮತ್ತು ಅತಿ ಮುಖ್ಯವಾಗಿ "ಸಮಯ ಪ್ರಜ್ಞೆ" ಮುಂತಾದ ಸಾಮಾಜಿಕ ಶಿಸ್ತುಗಳನ್ನು ಶಿಕ್ಷಕರು ಮಕ್ಕಳಿಗೆ ಕಲಿಸಿಕೊಡಬೇಕು. ಕೆಲವೊಮ್ಮೆ ತಮ್ಮ ನಡವಳಿಕೆಯ ಮೂಲಕ ತೋರಿಸಿಕೊಡಬೇಕು.

ಶಿಸ್ತಿನ ಪರಿಪಾಲನೆ ಎಂದರೆ ಬೇರೆಯವರಿಗೆ ತೊಂದರೆ ಕೊಡುವುದಲ್ಲ. ಅತಿ ಶಿಸ್ತು ಕೂಡ ಕೆಲವೊಮ್ಮೆ ಮಾರಕವಾಗಬಹುದು. ನಮ್ಮ ಜೀವನದ ಶಿಸ್ತು ಇತರರಿಗೆ ಮಾದರಿಯಾಗಿ ಸ್ವಯಂ ಪ್ರೇರಣೆಯಿಂದ ಅವರೂ ಕೂಡ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತಾಗಬೇಕು.

ಪ್ರತಿ ಹೆಜ್ಜೆಯಲ್ಲಿ ಶಿಸ್ತು ಇದ್ದರೆ ಕೀರ್ತಿ ಯಶಸ್ಸು ಖಂಡಿತಾ ಲಭಿಸುತ್ತದೆ. ಪೋಷಕರು ತಮ್ಮ ಮಕ್ಕಳನ್ನು ಅತಿ ಮುದ್ದಿನಿಂದ ಹಾಳು ಮಾಡದೆ, ಶಿಸ್ತಿನ ಜೀವನಕ್ಕೆ ತಳಪಾಯ ಹಾಕಬೇಕು. ಮಕ್ಕಳಲ್ಲಿ ಶಿಸ್ತನ್ನು ಅಳವಡಿಸಿ ಅದನ್ನು ಪಾಲಿಸುವಂತೆ ಮಾಡುವ ಜವಾಬ್ದಾರಿ ಶಿಕ್ಷಕರದ್ದಾಗಿದೆ. ಮುಖ್ಯವಾಗಿ ವಿದ್ಯಾಭ್ಯಾಸದಲ್ಲಿ ಶಿಸ್ತನ್ನು ಅಳವಡಿಸಿಕೊಂಡರೆ ಖಚಿತವಾಗಿ ವಿದ್ಯಾರ್ಥಿಗಳು ವಿದ್ಯೆಯಲ್ಲಿ ಮೇಲುಗೈ ಸಾಧಿಸುತ್ತಾರೆ. ಈ ಶಿಸ್ತನ್ನು ಶಿಕ್ಷಕರು ಮಕ್ಕಳಲ್ಲಿ ಜಾಗೃತಗೊಳಿಸಬೇಕು.

ಒಟ್ಟಿನಲ್ಲಿ ಮಕ್ಕಳಲ್ಲಿ ಶಿಸ್ತನ್ನು ಮೂಡಿಸಿ, ಬೆಳೆಸಿ ಅವರನ್ನು ಒಬ್ಬ ಜವಾಬ್ದಾರಿಯುತ ರಾಷ್ಟ್ರ ಪ್ರಜೆಯನ್ನಾಗಿ ಮಾಡುವ ಗುರುತರ ಕರ್ತವ್ಯ ಪೋಷಕರ ಮತ್ತು ಶಿಕ್ಷಕರ ಮೇಲಿದೆ.

"ಶಿಸ್ತಿನಿಂದಲೇ ನೆಮ್ಮದಿ, ಶಿಸ್ತಿನಿಂದಲೇ ಆರೋಗ್ಯ, ಶಿಸ್ತಿನಿಂದಲೇ ಯಶಸ್ಸು"

●

# ವಿಭಜನೆಯ ಘೋರ ದುರಂತ

■ ಶ್ರೀ ಸು. ರಾಮಣ್ಣ

**ಸ್ವಾತಂತ್ರ್ಯ ಅಮೃತೋತ್ಸವದ ಸಂದರ್ಭದಲ್ಲಿ ಈ ಘಟನೆಗಳು ಎಲ್ಲರ ಸ್ಮರಣೆಗೆ ಬರಬೇಕು ಎಂಬ ಉದ್ದೇಶದಿಂದ ಈ ಲೇಖನಮಾಲೆ ಈ ಪುಟಗಳು ಸು. ರಾಮಣ್ಣನವರ ಸ್ವಾತಂತ್ರ್ಯ ಹೋರಾಟ ಪುಸ್ತಕದ ಒಂದು ಭಾಗ. ಇದು 3–4 ಕಂತುಗಳು ಬರುತ್ತದೆ**

(ಹಿಂದಿನ ಸಂಚಿಕೆಯಿಂದ...)

1947ರ ಆಗಸ್ಟ್ 15ರಂದು ಸ್ವಾತಂತ್ರ್ಯವನ್ನು ಗಳಿಸಿದ್ದು ಭಾರತದ ಹೆಗ್ಗಳಿಕೆಯೇ. ಆದರೆ ಅದೇ ದಿನ ಒಂದು ಘೋರ ದುರಂತವೂ ನಡೆದುಹೋಯಿತು. ಅಖಂಡವಾಗಿದ್ದ ಭಾರತ ತ್ರಿಖಂಡವಾಗಿ ಒಡೆದುಹೋಯಿತು. ಪಾಕಿಸ್ತಾನ ಎಂಬ ಪಾಪದ ಕೂಸಿನ ಜನ್ಮವಾಯಿತು. ಈ ದುರಂತದ ಹಿನ್ನೆಲೆ, ಕಲಿಯಬೇಕಾದ ಪಾಠ ಇವುಗಳನ್ನು ಪ್ರತಿಯೊಬ್ಬ ಭಾರತೀಯನೂ ಅರಿಯಲೇಬೇಕು. ಹೀಗಾಗಿ ಯಾವುದೇ ಪೂರ್ವಾಗ್ರಹವಾಗಲಿ, ಮತ್ತೊಬ್ಬರ ನಿಂದೆಯಾಗಲಿ ಮಾಡದೆ, ಸ್ವಾತಂತ್ರ್ಯ ಸಮರದ ಆ ಕರಾಳ ಮುಖವನ್ನು ಸಂಕ್ಷೇಪದಲ್ಲಿ ಪರಿಚಯಿಸುವ ಪ್ರಯತ್ನ ಇಲ್ಲಿದೆ.

ಇತ್ತ ದಿಲ್ಲಿಯಲ್ಲಿ ಪಂಡಿತ ನೆಹರು ಸ್ವತಂತ್ರ ಭಾರತದ ಪ್ರಧಾನ ಮಂತ್ರಿಯಾಗಿ ಶಪಥ ಸ್ವೀಕರಿಸುತ್ತಿದ್ದರೆ, ಅತ್ತ ಮಹಾತ್ಮಾ ಗಾಂಧಿ ಮಮ್ಮಲ ಮರುಗಿ ಸಂತ್ರಸ್ತರ ನಡುವೆ ಶಾಂತಿ ಸ್ಥಾಪನೆಗಾಗಿ ಹೆಣಗುತ್ತಿದ್ದರು! ಪೂರ್ವ–ಪಶ್ಚಿಮ ಪಾಕಿಸ್ತಾನದಲ್ಲಿ ನಡೆಯುತ್ತಿದ್ದ ರಕ್ತದೋಕುಳಿ, ತಮ್ಮ ಮನೆ ಮಠಗಳನ್ನು ಕಳೆದುಕೊಂಡು ನಿರಾಶ್ರಿತರಾಗಿ ಭಾರತದತ್ತ ಧಾವಿಸುತ್ತಿದ್ದ ಜನಸಾಗರವನ್ನು ಕಂಡು ಮಹಾತ್ಮ ಗಾಂಧೀಜಿ ತೆಗೆದ ಉದ್ಗಾರ; 'We committed a great Himalayan blunder'!

## ನಾಯಕತ್ವದ ವಚನಭಂಗ

ದೇಶ ವಿಭಜನೆ ಆಗಬಹುದೆಂಬ ಲಕ್ಷಣಗಳು ಕಂಡುಬಂದಾಗ ಸಂತಪ್ತರಾದ ಮಹಾತ್ಮಾಜೀ ಬ್ರಿಟಿಷರನ್ನು ಕುರಿತು ಆಡಿದ್ದು; Akhand Bharat is an article of faith for me, "Vivisect me, before you vivisect India" – ಪಂಡಿತ ನೆಹರು ಭಾವೋದ್ರೇಕದಿಂದ ಹೇಳಿದ್ದು; "The very concept of Pakistan is a fantastic nonsense." ಉಕ್ಕಿನ ಮನುಷ್ಯರೆಂದೇ ಗುರುತಿಸಲ್ಪಟ್ಟಿದ್ದ ಸರ್ದಾರ ಪಟೇಲ್ ಮುಸ್ಲಿಂ ಲೀಗ್ ನೇರ ಹೋರಾಟಕ್ಕೆ (direct action) ಕರೆಕೊಟ್ಟಾಗ "Swords will be met with Swords. But Indian cannot be divided" ಎಂದು ಘರ್ಜಿಸಿದ್ದರು. ಇಷ್ಟಾದರೂ ಇವರೆಲ್ಲರ ಕಣ್ಣೆದುರಿಗೇ ಭಾರತ ತುಂಡಾಗಿ, ದೇಶದ ಜನತೆಗೆ ನೀಡಿದ್ದ ವಚನಭಂಗವಾಯಿತೆಂಬುದೇ ಸತ್ಯ.



1947 ಆಗಸ್ಟ್ 15 ಗಾಂಧೀಜಿ ಕಂಡಿದ್ದ ಕನಸು ಭಗ್ನವಾಗಿ ಹೋಯಿತು. **'ಸಂಪೂರ್ಣ ಸ್ವರಾಜ್ಯ ನಮ್ಮ ಗುರಿ'** ಎಂಬ ಕಾಂಗ್ರೆಸ್‌ನ ನಿರ್ಣಯ ಮಣ್ಣು ಮುಕ್ಕಿತು. ಸ್ವಾತಂತ್ರ್ಯಕ್ಕಾಗಿ ವಿಭಜನೆಯ ಅನ್ಯಾಯದ, ಅಪಮಾನದ ಬೆಲೆ ತೆರಬೇಕಾಗಿ ಬಂತು. ಈ ವಿಭಜನೆ ಕೇವಲ ಭೌಗೋಳಿಕ ಮಾತ್ರವಲ್ಲ, ಹಿಂದು ಜನಮಾನಸದ್ದೂ ಸಹ. ಪಾಕಿಸ್ತಾನವಾದ ಪ್ರದೇಶದಲ್ಲಿ ತಲತಲಾಂತರದಿಂದ ವಾಸವಾಗಿದ್ದ ಹಿಂದುಗಳ ಮೇಲೆ ಮುಸಲ್ಮಾನರಿಂದ ಬರ್ಬರ ಅತ್ಯಾಚಾರ ನಡೆಯಿತು. ಹಿಂದುಗಳಾಗಿ ಹುಟ್ಟಿದ್ದ ಒಂದೇ ಅಪರಾಧಕ್ಕಾಗಿ ಆ ಹತಭಾಗ್ಯ ಜನ ಇತಿಹಾಸದಲ್ಲಿ ಎಂದೂ ಕೇಳರಿಯದ, ಕಂಡರಿಯದ ಚಿತ್ರಹಿಂಸೆಗೆ ಗುರಿಯಾದರು. ಗೋರಿಗಳಲ್ಲಿ ಹೂತುಹೋಗಿದ್ದ ಘಜನಿ ಘೋರಿಗಳಿಗೂ ನಾಚಿಕೆಯಾಗುವಂತೆ ಲಕ್ಷ ಲಕ್ಷ ಸಂಖ್ಯೆಯಲ್ಲಿ ಹಿಂದುಗಳ ಮಾರಣ ಹೋಮ, ಮಾನಿನಿಯರ ಮಾನಭಂಗ ಎಗ್ಗಿಲ್ಲದೇ ನಡೆಯಿತು. ಉಟ್ಟ ಬಟ್ಟೆಯಲ್ಲಿ ಸಿಕ್ಕಷ್ಟು ವಸ್ತುಗಳನ್ನು ತೆಗೆದುಕೊಂಡು ಅಸಂಖ್ಯಾತ ಹಿಂದುಗಳು ಭಾರತಕ್ಕೆ ಓಡಿಬರುವಂತಾದುದು ದೌರ್ಭಾಗ್ಯವೇ ಸರಿ.

1942ರಲ್ಲಿ ಗಾಂಧೀಜಿ Quit India ಚಳುವಳಿಗೆ ಕರೆಕೊಟ್ಟರು. ಮುಸ್ಲಿಂ ಲೀಗ್‌ನ ಮೊಹಮದಾಲಿ ಜಿನ್ನಾ ಪ್ರತಿಕ್ರಿಯಿಸಿ Oh Britishers, split India, before you quit India. We are separate nation by ourselves. We cannot live with Hindus. We want nothing less than Pakistan ಎಂದರು. ಅಂತಿಮವಾಗಿ ಜಿನ್ನಾ ಗೆದ್ದು, ಗಾಂಧೀಜಿ ಸೋತರು. ಲಕ್ಷಾಂತರ ಹಿಂದುಗಳ ಸರ್ವನಾಶದ ಪಾಪಕ್ಕೆ ಹೊಣೆಗಾರರು ಯಾರು?

(ಮುಂದುವರೆಯುವುದು...)

ಎಲ್ಲ ರೀತಿಯಿಂದಲೂ ಮಾನವರನ್ನು ಸೃಷ್ಟಿಸುವ ವಿದ್ಯೆ ನಮಗೆ ಬೇಕು. – ಸ್ವಾಮಿ ವಿವೇಕಾನಂದ

# NEP–2020 ರಲ್ಲಿ ಬರುವ FLN ಅನ್ನುವುದು ಏನು?

**ಚಿದಾನಂದ ಆ ಕೇ ಪಾಟೀಲ್**
**ಪ್ರಧಾನ ಕಾರ್ಯದರ್ಶಿ, ಕ.ರಾ.ಮಾ.ಶಿ.ಸಂಘ**
**ಸದಸ್ಯರು, ಎನ್.ಇ.ಪಿ2020**
**ಅನುಷ್ಠಾನ ಸಮಿತಿ(ಶಾಲಾ ಶಿಕ್ಷಣ),**
**ಕರ್ನಾಟಕ ಸರ್ಕಾರ, ಕರ್ನಾಟಕ**



ಆತ್ಮೀಯ ಓದುಗರಿಗೆ ಈ ಸಂಚಿಕೆಯಲ್ಲಿ NEP –2020 ರಲ್ಲಿ ಎರಡನೆಯ ಅಧ್ಯಾಯ– Foundation Literacy and Numeracy :An urgent and Necessary Presequisite to learning ಎನ್ನುವುದಿದೆ. ಇದು ಮಗುವಿನ ಕಲಿಕೆಯ ಪ್ರಾರಂಭದ ಬುನಾದಿ ಹಂತದಲ್ಲಿ ಅಕ್ಷರ ಜ್ಞಾನ ಮತ್ತು ಸಂಖ್ಯಾಜ್ಞಾನದ ಅವಶ್ಯಕತೆಯನ್ನು ತಿಳಿಸುವುದರ ಜೊತೆಯಲ್ಲಿ ಅದನ್ನು ಸಾಧಿಸುವುದು ಹೇಗೆ? ಎನ್ನುವುದರ ವಿವರಣೆ ನೀಡುತ್ತದೆ.

ಮಗುವಿನ ಕಲಿಕೆಯ ಜೀವನದಲ್ಲಿ ಓದುವುದು ಮತ್ತು ಬರೆಯುವುದು ಅದರ ಜೊತೆಯಲ್ಲಿ ಸಂಖ್ಯೆಗಳನ್ನು ಇಟ್ಟುಕೊಂಡು ಸಂಕಲನ, ವ್ಯವಕಲನದಂತಹ ಅಂಶಗಳು ಬಹು ಮುಖ್ಯವಾದವುಗಳು. ಒಂದು ಅಂದಾಜಿನ ಪ್ರಕಾರ ದೇಶದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ 5 ಕೋಟಿಗಿಂತ ಹೆಚ್ಚು. ಆದರೆ ಹೆಚ್ಚು ಮಕ್ಕಳು ಅಕ್ಷರಜ್ಞಾನ ಮತ್ತು ಸಂಖ್ಯೆಗಳ ಜ್ಞಾನದ ಕೊರತೆಯನ್ನು ಅನುಭವಿಸುತ್ತಿದ್ದಾರೆ. ಅದಕ್ಕಾಗಿ ಪ್ರಾಥಮಿಕ ಶಾಲೆಯಲ್ಲಿರುವ ಎಲ್ಲ ವಿದ್ಯಾರ್ಥಿಗಳ ಸಾರ್ವತ್ರಿಕವಾಗಿ ಬುನಾದಿ ಅಕ್ಷರಜ್ಞಾನ ಮತ್ತು ಸಂಖ್ಯೆ ಜ್ಞಾನವನ್ನು ಸಂಪಾದಿಸುವ ವ್ಯವಸ್ಥೆ ಮಾಡುವುದು ಪ್ರಥಮ ಆದ್ಯತೆಯ ಕಾರ್ಯವಾಗಿದೆ. ಅದಕ್ಕಾಗಿ ಕೆಳಗಿನ ಅಂಶಗಳನ್ನು ಸೂಚಿಸಿದೆ.

- ವಿದ್ಯಾರ್ಥಿ ಶಿಕ್ಷಕರ ಅನುಪಾತವು ಪ್ರತಿ ಶಾಲಾ ಹಂತದಲ್ಲಿ 30:1 ಇರಬೇಕು. ಆದರೆ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ 25:1 ಹೊಂದಿರಬೇಕೆಂದು ಹೇಳಿದೆ ಮತ್ತು ಶಿಕ್ಷಕರಿಗೆ ನಿರಂತರ ತರಬೇತಿಯನ್ನು ಮತ್ತು ಅವರ ವೃತ್ತಿ ಕೌಶಲ್ಯವನ್ನು ಅಭಿವೃದ್ಧಿ ಪಡಿಸಲು ಅನುಕೂಲಕರ ವಾತಾವರಣ ನಿರ್ಮಿಸಿಕೊಡಲು ಹೇಳಿದೆ ಮತ್ತು ಶಿಕ್ಷಕರ ಶಿಕ್ಷಣವನ್ನು ಇದಕ್ಕೆ ಪೂರಕವಾಗುವಂತೆ ಮರು ವಿನ್ಯಾಸಗೊಳಿಸಲು ತಿಳಿಸಿದೆ.
- ವಿದ್ಯಾರ್ಥಿಗಳಿಗೆ ಸಾಮಾನ್ಯವಾಗಿ ಓದುವುದು, ಬರೆಯುವುದು, ಮಾತನಾಡುವುದು ಎಣಿಸುವುದು ಮತ್ತು ಅಂಕಗಣಿತ ಜ್ಞಾನಕ್ಕೆ ಪೂರಕವಾದ ಚಟುವಟಿಕೆಗಳನ್ನು ಮಾಡಿಸುವುದು ಮತ್ತು ಇದಕ್ಕೆ ಪೂರಕವಾದ ಪ್ರೋತ್ಸಾಹದಾಯಕ ಚಟುವಟಿಕೆಗಳನ್ನು ಶಾಲೆಗಳಲ್ಲಿ ಅನುಸರಿಸುವುದು ಮತ್ತು ನಿರಂತರ ಸಂಕಲನಾತ್ಮಕ ಮೌಲ್ಯಮಾಪನದೊಂದಿಗೆ ಮಕ್ಕಳ ಪ್ರಗತಿಯನ್ನು ಗುರುತಿಸುವುದು.
- ಪ್ರಸ್ತುತ ಸರ್ಕಾರಿ ವ್ಯವಸ್ಥೆಯ ECCE ಶಿಕ್ಷಣ ಸಾರ್ವತ್ರಿಕವಾಗಿ ಇಲ್ಲದಿರುವುದರಿಂದಾಗಿ ಈಐಓ ಮಕ್ಕಳಲ್ಲಿ ಸಾಧಿಸುವುದಕ್ಕಾಗಿ ಮಧ್ಯಂತರ ಮೂರು ತಿಂಗಳ ಆಟ– ಆಧರಿತವಾದ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವ ಅವಶ್ಯಕತೆಯನ್ನು ವಿವರಿಸಿದೆ.
- ಮಕ್ಕಳಲ್ಲಿ FLN ಸಾಧಿಸುವುದಕ್ಕಾಗಿ ತಂತ್ರಜ್ಞಾನದ ಸಹಕಾರದ ಅವಶ್ಯಕತೆಯನ್ನು ಸೂಚಿಸಿದೆ. ಅದಕ್ಕಾಗಿ ಆಋಏಖಊಂ ಡಿಜಿಟಲ್ ವೇದಿಕೆಯನ್ನು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಪೂರಕವಾದ ಸಾಹಿತ್ಯವನ್ನು ಒದಗಿಸುವುದು.
- ಸಹಪಾಠಿಗಳ ಬೋಧನೆಗೆ ಇಲ್ಲಿ ಅವಕಾಶ ಕಲ್ಪಿಸಿದೆ. ಇದರಿಂದಾಗಿ ವಿದ್ಯಾರ್ಥಿಗಳಿಗೂ ಪರಸ್ಪರ ಒಬ್ಬರಿಗೊಬ್ಬರು ಬೋಧಿಸುವುದರಿಂದ ಕಲಿಯುವವರಿಗೆ ಮಾತ್ರವಲ್ಲ, ಕಲಿಸುವವರಿಗೂ ಕಲಿಕೆ ಗಟ್ಟಿಗೊಳ್ಳುತ್ತದೆ.
- ವಿದ್ಯಾರ್ಥಿಗಳಲ್ಲಿ ಆನಂದದಾಯಕ ಮಾತ್ರ ಸ್ಫೂರ್ತಿದಾಯಕ ಕಲಿಕೆಯನ್ನು ಉತ್ತಮಪಡಿಸುವುದಕ್ಕಾಗಿ ಎಲ್ಲ ಸ್ಥಳೀಯ ಮತ್ತು ಭಾರತೀಯ ಭಾಷೆಗಳಲ್ಲಿಯ ಉತ್ತಮ ಗುಣಮಟ್ಟದ ಸಾಹಿತ್ಯವನ್ನು ಅನುವಾದ ಮಾಡಲು ಮತ್ತು ಅದು ದೇಶದ ಎಲ್ಲ ಮಕ್ಕಳಿಗೆ ಅದರ ಉಪಯೋಗವಾಗುವಂತೆ ನೋಡಿಕೊಳ್ಳಲು ತಿಳಿಸಿದೆ. ಗ್ರಂಥಾಲಯದಲ್ಲಿ ಎಲ್ಲರಿಗೂ ಸುಲಭವಾಗಿ ದೊರಕುವಂತೆ ಆಗಬೇಕು. ಜೊತೆಯಲ್ಲಿ ಡಿಜಿಟಲ್ ಗ್ರಂಥಾಲಯಗಳು ಅಭಿವೃದ್ಧಿಯಾಗಬೇಕು. ಅವು ಹಳ್ಳಿಗಳ ಗ್ರಂಥಾಲಯದಲ್ಲಿಯೂ ಉಪಯೋಗಕ್ಕೆ ಬರುವಂತೆ ಆಗಲು ತಿಳಿಸಿದೆ.
- "ಸದೃಢ ದೇಹದಲ್ಲಿ ಸದೃಢ ಮನಸ್ಸು ಇರುತ್ತದೆ" ಎನ್ನುವುದನ್ನು ಇಲ್ಲಿ ಹೇಳಿದೆ. ಅದಕ್ಕಾಗಿ ಮಕ್ಕಳು ಅಪೌಷ್ಠಿಕತೆಯಿಂದ ಮತ್ತು ಅನಾರೋಗ್ಯದಿಂದ ಬಳಲಬಾರದು. ಅದಕ್ಕಾಗಿ ಮಧ್ಯಾಹ್ನದ ಬಿಸಿಊಟದೊಂದಿಗೆ ಬೆಳಗಿನ ಉಪಹಾರವನ್ನು ಮಕ್ಕಳಿಗೆ ನೀಡಬೇಕು. ಶಾಲಾ ಮಕ್ಕಳಲ್ಲಿ 100% ರಷ್ಟು ರೋಗನಿರೋಧಕ ಸಾಧಿಸಲು ಆರೋಗ್ಯ ಇಲಾಖೆಯ ಸಹಕಾರದೊಂದಿಗೆ ಮಕ್ಕಳ ಆರೋಗ್ಯ ಗಮನಿಸಲು ಸೂಚಿಸಿದೆ.

ಅದಕ್ಕಾಗಿ ಭಾರತ ಸರ್ಕಾರವು NIPUN BHARAT (National Initiatives for Proficiency in Reading with understanding and Numeracy) ಎನ್ನುವ ವಿಷನ್ ಪ್ರಾರಂಭಿಸಿದೆ. ಏನಿದು ಎಂದರೆ NIPUN BHARAT VISION by 2026–27 ಒಳಗಾಗಿ ಭಾರತದ ಶಾಲೆಗಳಲ್ಲಿರುವ ಮಕ್ಕಳಿಗೆಲ್ಲಾ ಆತ್ಮವಿಶ್ವಾಸದಿಂದ ಓದುವುದು, ಬರೆಯುವುದು, ಜೀವನಕ್ಕೆ ಅವಶ್ಯವಿರುವ ಗಣಿತ (ಕೂಡುವುದು, ಕಳೆಯುವುದು, ಗುಣಾಕಾರ ಮತ್ತು ಭಾಗಾಕಾರ) ಕಲಿಕೆಯ ಜೊತೆಯಲ್ಲಿ ಅವಶ್ಯವಿರುವ ಕೌಶಲ್ಯ ( Learn basic life skills) ಗಳನ್ನು ಉತ್ತೇಜಿಸುವ ಗುರಿಯೊಂದಿಗೆ ಕಾರ್ಯಪ್ರಾರಂಭಿಸಿದೆ. ಇದು NEP–2020 ಯಲ್ಲಿಯ ಎರಡನೇ ಅಧ್ಯಾಯದ ಈಐಓನ್ನು ಮಕ್ಕಳಲ್ಲಿ ಸಾಧಿಸುವ ಉದ್ದೇಶ ಗುರಿಯನ್ನು ಇಟ್ಟುಕೊಂಡಿದೆ. ಅದಕ್ಕಾಗಿ ನಿಪುಣ ಭಾರತ ಮಿಷನ್‌ನಲ್ಲಿ ರಾಷ್ಟ್ರೀಯ, ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಶಾಲಾ ಹಂತದಲ್ಲಿ ಮಾಡಬೇಕಾದ ಕಾರ್ಯಗಳನ್ನು ಮತ್ತು ಸಾಧಿಸುವ ವಿಧಾನವನ್ನು ವಿವರವಾಗಿ ವಿವರಿಸಿದೆ ಹಾಗೂ ಕ್ಲಾಸ್ ರೂಂ ಚಟುವಟಿಕೆ ಆಟಿಕೆಯ ಆಧರಿತ ಪಠ್ಯಚಟುವಟಿಕೆ, ಚಟುವಟಿಕೆ ಆಧರಿತ ಕಲಿಕೆ, ಆಟ ಆಡುತ್ತಾ ಕಲಿಕೆ, ಕಲಾಶಿಕ್ಷಣ (ಸಂಗೀತ, ನೃತ್ಯ ಒಳಗೊಂಡಿರಬೇಕು, ಕ್ರೀಡಾ ಚಟುವಟಿಕೆಗಳು, ಕಥೆ ಹೇಳುತ್ತಾ ಶಿಕ್ಷಣ,

ಪುಟ 9 ಕ್ಕೆ ➢

# ವರ್ಗಾವಣೆ ಎಂಬ ಪ್ರಹಸನಕ್ಕೆ ತಾರ್ಕಿಕ ಅಂತ್ಯ ಎಂದು?

**ಶ್ರೀಮತಿ ಮಮತಾ ಡಿ.ಕೆ.**
ಸ. ಶಿ. ಸರ್ಕಾರಿ ಪ್ರೌಢಶಾಲೆ, ಅತ್ತಿಹಳ್ಳಿ, ಕನಕಪುರ ತಾ॥, ರಾಮನಗರ ಜಿಲ್ಲೆ ಮತ್ತು ಮಹಿಳಾ ಕಾರ್ಯದರ್ಶಿ, ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ, ದೆಹಲಿ



**ಗುರು ಬ್ರಹ್ಮ ಗುರು ವಿಷ್ಣು ಗುರು ದೇವೋ ಮಹೇಶ್ವರಃ**
**ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈಶ್ರೀ ಗುರುವೇ ನಮಃ ॥**

ಶಿಕ್ಷಕರಿಗೆ ಸಂಬಂಧಿಸಿದ ಯಾವುದಾದರೂ ಒಂದು ಲೇಖನ ಬರೆಯಬೇಕೆಂದರೆ ಮೊದಲು ಬರುವುದೇ ಈ ಶ್ಲೋಕ. ಆದರೆ ಯಾಕೋ ಇತ್ತೀಚಿಗೆ ಈ ಶ್ಲೋಕದ ಅರ್ಥ ಸರಿಯಾಗಿ ತಿಳಿದುಕೊಳ್ಳಲಾಗುತ್ತಿಲ್ಲವೋ ಅಥವಾ ಗುರುವಿಗೆ ಅಂತಹ ಶಕ್ತಿ ಇಲ್ಲದಾಗುತ್ತಿದೆಯೋ ತಿಳಿಯುತ್ತಿಲ್ಲ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ಇರುವ ಮಹತ್ವ ಇನ್ನಾರಿಗೂ ಇಲ್ಲ ಎಂದು ಖಡಾಖಂಡಿತವಾಗಿ ಹೇಳಬಹುದು. ಏಕೆಂದರೆ ನಮ್ಮ ಸಂಸ್ಕೃತಿಯಲ್ಲಿ ರಾಜ–ಮಹಾರಾಜರು ಸಹಾ ಗುರುವಿಗೆ ತಲೆಬಾಗಿ ನಮಸ್ಕರಿಸುತ್ತಿದ್ದನ್ನು ನಾವೆಲ್ಲಾ ಓದಿದ್ದೇವೆ, ಕೇಳಿದ್ದೇವೆ. ಶಿಕ್ಷಕನ ಶಕ್ತಿಯ ಬಗ್ಗೆ ಚಾಣುಕ್ಯ ಹೇಳಿದ ಮಾತೊಂದು ಶಿಕ್ಷಕರ ಶಕ್ತಿಯ ದ್ಯೋತಕವಾಗಿದೆ. ಅದೇನೆಂದರೆ "ನಿರ್ಮಾಣ್ ಔರ್ ಪ್ರಲಯ್ ದೋನೋಂ ಶಿಕ್ಷಕ ಕೆ ಗೋದ್ ಮೇ ಪಲತೆ ಹೈಂ". ಆದರೆ ಇಂದು ಅಂತಹ ಶಕ್ತಿಯನ್ನು ಹೊಂದಿದ್ದ ಶಿಕ್ಷಕ ಪ್ರತಿಯೊಂದಕ್ಕೂ ರಾಜರ ಬಳಿ ಕೈಯೊಡ್ಡಿ ಅತ್ಯಂತ ಶೋಚನೀಯವಾಗಿ ಬೇಳಾಡಿ ಕೇಳಿಕೊಂಡರೂ ತನಗೆ ಬೇಕಾದುದನ್ನು ಪಡೆದುಕೊಳ್ಳಲು ಆಗುತ್ತಿಲ್ಲ. ಗುರುವಿನ ಬಳಿಯೇ ಹೋಗಿ ಶಿಕ್ಷಣವನ್ನು ಪಡೆಯುವ ಕಾಲ ಒಂದಿತ್ತು. ಈಗ ಅನೇಕ ಕಾರಣಗಳಿಂದ, ಉದರನಿಮಿತ್ತ ಒಬ್ಬ ವ್ಯಕ್ತಿ ಉದ್ಯೋಗಕ್ಕಾಗಿ ತನ್ನ ಸ್ವಂತ ಸ್ಥಳವನ್ನು ಬಿಟ್ಟು ಬೇರೆ ಸ್ಥಳಕ್ಕೆ ಬರಬೇಕಾಗುತ್ತದೆ. ಆದರೆ ಒಂದು ಹಂತವನ್ನು ಮುಗಿಸಿದ ಮೇಲೂ ಆ ಶಿಕ್ಷಕ ತನ್ನ ಸ್ವಂತ ಸ್ಥಳಕ್ಕೆ ಹೋಗಿ ನೆಮ್ಮದಿಯಿಂದ ಉದ್ಯೋಗವನ್ನು (ಶಿಕ್ಷಣ ನೀಡುವ ಕೆಲಸವನ್ನು ಮಾಡಲು) ಆಗುತ್ತಿಲ್ಲ. ಒಬ್ಬ ಶಿಕ್ಷಕ ತನ್ನ ಹೆಂಡತಿಯೊಂದಿಗೋ, ಒಬ್ಬ ಹೆಂಡತಿ ತನ್ನ ಪತಿಯೊಂದಿಗೋ, ಒಬ್ಬ ಮಗ ತನ್ನ ಅನಾರೋಗ್ಯದಿಂದ ಕೂಡಿದ ಪೋಷಕರೊಂದಿಗೋ ಇರಲು ಆಗುತ್ತಿಲ್ಲ. ಎಲ್ಲರಿಂದಲೂ ದೂರ ಇದ್ದು, ನೆಮ್ಮದಿಯಾಗಿ ಶಿಕ್ಷಣ ನೀಡುವ ಕೆಲಸವನ್ನು ಮಾಡುವುದಾದರೂ ಹೇಗೆ? ಇರಲಿ ಒಂದೆರೆಡು ವರ್ಷಗಳು ಯಾವುದೋವ್ಯಾದು ಕಾರಣಗಳಿಂದ ಹೀಗೆ ಆಗುತ್ತಿರಬಹುದು ಎಂದರೆ ಸುಮ್ಮನಿದ್ದು ಬಿಡೋಣ. ಹಾಗೆ ಆಗುತ್ತಿಲ್ಲವೇ?

1. ಒಬ್ಬ ಶಿಕ್ಷಕಿ ಕಳೆದ ಹದಿನೆಂಟು ವರ್ಷಗಳಿಂದಲೂ ಹಳ್ಳಿಯಲ್ಲಿ ಉದ್ಯೋಗ ಮಾಡುತ್ತಿದ್ದು, ಈಗಲೂ ತನ್ನ ವಯಸ್ಸಾದ ಅನಾರೋಗ್ಯದಿಂದ ಕೂಡಿದ ತಾಯಿಗೋಸ್ಕರ ಚಿಕಿತ್ಸೆ ದೊರೆಯುವ ಒಂದು ಸ್ಥಳಕ್ಕೆ ವರ್ಗಾವಣೆಯಾಗಲೂ ಆಗುತ್ತಿಲ್ಲವೆಂದರೆ ನೆಮ್ಮದಿಯಿಂದ, ವಿದ್ಯಾರ್ಥಿಗಳ ಹಿತದೃಷ್ಟಿಗಾಗಿ, ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾಗಿ ಶಿಕ್ಷಣವನ್ನು ನೀಡಬಲ್ಲರೇ? ಇನ್ನೂ

2. ಖಾಸಗಿ ಉದ್ಯೋಗದಲ್ಲಿರುವ ಪತ್ನಿ, ವಯಸ್ಸಿಗೆ ಬಂದ ಮಕ್ಕಳು ಒಂದುಕಡೆ, ವಯಸ್ಸಾಗಿರುವ ಪತ್ನಿಯನ್ನು ಕಳೆದುಕೊಂಡು ಅನಾರೋಗ್ಯದಿಂದಿರುವ ತಂದೆ ಒಂದು ಕಡೆ, ಶಿಕ್ಷಕನಾಗಿ ಉದ್ಯೋಗ ಮಾಡುತ್ತಿರುವ ಮಗ ಒಂದು ಕಡೆ. ನೆಮ್ಮದಿಯಿಂದ ವಿದ್ಯಾದಾನ ಮಾಡುತ್ತಾ, ಸಮಾಜಮುಖಿ ಕಾರ್ಯಗಳನ್ನು ಮಾಡುವುದಾದರೂ ಹೇಗೆ?

3. ಪತ್ನಿ ಮತ್ತು ಮಕ್ಕಳು ನೆಮ್ಮದಿಯಿಂದ ಇರಲಿ ಎಂದು 100 ಕಿ.ಮೀ ಗಿನ್ನು ಹೆಚ್ಚು ಪ್ರಯಾಣ ಮಾಡಿ ಉದ್ಯೋಗದ ಸ್ಥಳಕ್ಕೆ ಬರುವ ಶಿಕ್ಷಕ/ಕಿಯರು ಎಷ್ಟು ಜನ? ಅಷ್ಟು ಪ್ರಯಾಣ ಮಾಡಿ ಬಂದ ಶಿಕ್ಷಕರು ನಿರಾಯಾಸವಾಗಿ ಬೋಧನೆ ಮಾಡಬಲ್ಲರೇ?

ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಶಿಕ್ಷಕರಿಗೂ ಒಂದೇ ನಿಯಮವಿದ್ದರೆ ಹೀಗಾಗಲಾರದು ಎಂದುಕೊಂಡಿದ್ದೇನೆ. ವರ್ಗಾವಣೆ ಸಮಯದಲ್ಲಿ ಸರಕಾರಿ ಉದ್ಯೋಗ ಮಾಡುತ್ತಿರುವ ಪತಿ–ಪತ್ನಿಯರಿಗೆ ಒಂದು ನಿಯಮ, ಖಾಸಗಿಯಲ್ಲಿ ಒಬ್ಬರು–ಸರಕಾರಿ ಉದ್ಯೋಗದಲ್ಲಿ ಒಬ್ಬರು ಇದ್ದರೆ ಒಂದು ನಿಯಮವೆಂದರೆ ಖಾಸಗಿ ಹಾಗೂ ಸರಕಾರಿ ಉದ್ಯೋಗಗಳನ್ನು ಮಾಡುತ್ತಿರುವ ಪತಿ–ಪತ್ನಿಯರು ಒಂದು ಕಡೆ ಇರಬಾರದೇ? ಸಾಮಾನ್ಯ ಶಿಕ್ಷಕಿಯರಿಗೆ ಒಂದು ನಿಯಮ? ಬೇರೆ ಇಲಾಖೆಗಳಲ್ಲಿನ ವರ್ಗಾವಣೆ ನೀತಿ–ನಿಯಮಗಳಂತೆಯೇ ಶಿಕ್ಷಣ ಇಲಾಖೆಯಲ್ಲಿಯೂ ಒಂದಷ್ಟು ವರ್ಷಗಳ ನಂತರ ಕಡ್ಡಾಯವಾಗಿ ಒಂದು ಸ್ಥಳದಿಂದ (50 ವರ್ಷ ಮೀರಿದವರು ಮತ್ತು ವಿಶೇಷ ಕಾರಣವುಳ್ಳವರನ್ನು ಹೊರತುಪಡಿಸಿ) ಇನ್ನೊಂದು ಸ್ಥಳಕ್ಕೆ ವರ್ಗಾವಣೆ ಮಾಡಲು ಇರುವ ಕಷ್ಟವಾದರೂ ಏನು? ಐದು ವರ್ಷಕ್ಕಿಂತಲೂ ಹೆಚ್ಚು ಕಾಲ ಒಂದೇ ಸ್ಥಳದಲ್ಲಿ ಉದ್ಯೋಗ ಮಾಡಬೇಕಾದರೆ ಒಬ್ಬ ಶಿಕ್ಷಕ ಅನುಭವಿಸುವ ನೋವಿನ ಬಗ್ಗೆ ಯಾರಿಗಾದರೂ ಅರಿವಿದೆಯೇ? ನೆಮ್ಮದಿಯ ವಾತಾವರಣವಿದ್ದರೇನೋ ಸರಿ, ಒಬ್ಬ ಶಿಕ್ಷಕ ಯಾವುದೋ ಸ್ಥಾನಿಕ ವ್ಯಕ್ತಿಗಳಿಂದ ತೊಂದರೆ ಅನುಭವಿಸುತ್ತಿದ್ದರೇ ಆ ಶಿಕ್ಷಕನ ಗತಿಯೇನು? ವರ್ಗಾವಣೆ ಸಮಯದಲ್ಲಿ ಅನೇಕ ಹೊಸ–ಹೊಸ ನಿಯಮಗಳನ್ನು ತರುವ ಅಧಿಕಾರಿಗಳಿಗೇ ಶಿಕ್ಷಕರ ನೋವು ಅರ್ಥವಾಗದೇ? ಈ ಬಾರಿಯಂತೂ ಶೇ 25 ಕ್ಕಿಂತ ಹೆಚ್ಚು ಖಾಲಿ ಹುದ್ದೆಗಳಿರುವ ತಾಲ್ಲೂಕುಗಳಿಂದ ವರ್ಗಾವಣೆಯನ್ನೇ ಮಾಡದೇ ಹೋದಿರಿ. ಖಾಲಿ ಹುದ್ದೆಗಳಿಂದ ಶಿಕ್ಷಣದ ಮೇಲೆ ಪರಿಣಾಮ ಹೆಚ್ಚಾಗುತ್ತದೆ. ನೋವಿನಲ್ಲಿರುವ, ನೆಮ್ಮದಿಯಿಂದ ಇಲ್ಲದೇ ಇರುವ ಶಿಕ್ಷಕನಿಂದ ಶಿಕ್ಷಣದ ಮೇಲೆ ಪರಿಣಾಮ ಆಗದೇ?

ಸಮಾಜದಲ್ಲಿ ಜೀವಿಸುವ ಎಲ್ಲರ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಡಬೇಕಾಗಿದ್ದ ಒಬ್ಬ ಶಿಕ್ಷಕನ ಸುತ್ತಲೂ ಅನೇಕ ಪ್ರಶ್ನೆಗಳ ಸರಮಾಲೆ ಗಿರಕಿ ಹೊಡೆಯುತ್ತಿದ್ದರೆ, ಸಮಾಜದ ಉತ್ತಮ ಮಾರ್ಗದರ್ಶಕನಾಗಬಲ್ಲನೇ ಒಬ್ಬ ಶಿಕ್ಷಕ. ಈ ಎಲ್ಲಾ ಸಂದರ್ಭಗಳಿಂದ ಶಿಕ್ಷಕನ ಮಾನಸಿಕ ಸ್ಥಿತಿ ಹದಗೆಡದೇ ಇರದೇ? ಇತ್ತ ಪಾರಿವಾರಿಕವಾಗಿಯೂ ನ್ಯಾಯ ಒದಗಿಸದೇ, ವೃತ್ತಿಗೂ ನ್ಯಾಯ ಒದಗಿಸದೇ, ಮಾನಸಿಕ ತೊಳಲಾಟದೊಡನೆ ಬದುಕುವ ಶಿಕ್ಷಕನ ಪರಿಸ್ಥಿತಿಯ ಅವಲೋಕನ ಮಾಡುವ ವ್ಯವಧಾನ ಯಾರಿಗಾದರೂ ಇದೆಯೇ? ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗಳನ್ನು ತಂದು ಭಾರತವನ್ನು ವಿಶ್ವಗುರು ಮಾಡುವತ್ತ ಯೋಚಿಸುವ ನಾವು ಶಿಕ್ಷಕರನ್ನು ಮಾನಸಿಕವಾಗಿ, ದೈಹಿಕವಾಗಿ ಸದೃಢರನ್ನಾಗಿ ಮಾಡುವುದು ಅತ್ಯಂತ ಅವಶ್ಯಕ. ●

# ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘ ಶಿಕ್ಷಕ ಸಮ್ಮಾನ – ಒಂದು ವರದಿ

ಸಮಾಜ ಸುಧಾರಣೆಯಲ್ಲಿ ಶಿಕ್ಷಕರ ಪಾತ್ರ ಮಹತ್ವಯುತವಾದದ್ದು ಎಂದು ಹಿಮಾಚಲ ಪ್ರದೇಶದ ಶಿಮ್ಲಾ (ಕುಫ್ರಿ)ದಲ್ಲಿ 19, ಡಿಸೆಂಬರ್, 2021ರಂದು ನಡೆದ ಶಿಕ್ಷಕ ಸಮ್ಮಾನ ಕಾರ್ಯಕ್ರಮದಲ್ಲಿ ಪ್ರಮುಖ ಧಾರ್ಮಿಕ ಬೋಧಕರಾದ ಸ್ವಾಮಿ ಜ್ಞಾನಾನಂದ ಜಿ ಮಹಾರಾಜ್‌ರು ಹೇಳಿದರು. ಕಾರ್ಯಕ್ರಮದಲ್ಲಿ ಹಿಮಾಚಲದ ಪ್ರದೇಶದ ಮುಖ್ಯಮಂತ್ರಿಗಳಾದ ಜೈರಾಮ್ ಠಾಕೂರ್ ಭಾಗವಹಿಸಿ ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಕೊಡುಗೆ ನೀಡಿದ ಮೂವರು ಶಿಕ್ಷಣ ತಜ್ಞರಿಗೆ ಅವರು "ಶಿಕ್ಷಾ ಭೂಷಣ" ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘ (ABRSM) 2015 ರಿಂದ ಪ್ರತಿ ವರ್ಷ "ಶಿಕ್ಷಾ ಭೂಷಣ ಪ್ರಶಸ್ತಿ" ಯೊಂದಿಗೆ ಅಂತಹ ಖ್ಯಾತ ಶಿಕ್ಷಣತಜ್ಞರನ್ನು ಗೌರವಿಸುತ್ತಿದೆ.

ಪ್ರೊ. ಕಪಿಲ್ ಕಪೂರ್, ಅಧ್ಯಕ್ಷರು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಸ್ಟಡಿ, ಶಿಮ್ಲಾ, ಹಿರಿಯ ಶಿಕ್ಷಣತಜ್ಞ ಮತ್ತು ಕವಿಗಳಾದ ಡಾ. ಬದ್ರಿ ಪ್ರಸಾದ್ ಪಾಂಚೋಲಿ, ಲೇಖಕಿ ಮತ್ತು ಶಿಕ್ಷಣ ತಜ್ಞೆ ಮತ್ತು ಪ್ರಮುಖ ಸಮಾಜ ಸೇವಕಿ ಆದ ಶ್ರೀಮತಿ ರೇಣು ದಾಂಡೇಕರ್ ರವರು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪ್ರತಿ ಪ್ರಶಸ್ತಿಗೆ ರೂ. 1 ಲಕ್ಷ, ಮತ್ತು ಸಿಲ್ವರ್ ಪ್ಲೇಟ್ ಸ್ಮರಣಿಕೆ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಲಾಗಿದೆ.

ಪ್ರೊ. ಕಪಿಲ್ ಕಪೂರ್ ಅವರು ಜಾಗತಿಕವಾಗಿ ಮೆಚ್ಚುಗೆ ಪಡೆದ ಶಿಕ್ಷಣತಜ್ಞರಾಗಿದ್ದಾರೆ ಮತ್ತು ಅವರ ಬೋಧನಾ ಕೃತಿಗಳು, ಪ್ರಕಟಣೆಗಳು ಮತ್ತು ಸಂಶೋಧನೆಗಳು ಅವರನ್ನು ಸಮೃದ್ಧ ಬರಹಗಾರ ಮತ್ತು ಅತ್ಯುತ್ತಮ ಸಂಶೋಧಕರನ್ನಾಗಿ ಮಾಡಿದೆ. ಹಲವಾರು ಸಂಸ್ಥೆಗಳು ಅವರನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಗೌರವಿಸಿವೆ. ಪ್ರೊ. ಕಪೂರ್‌ರವರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಸಮಿತಿಗಳ ಸದಸ್ಯರೂ ಕೂಡ ಆಗಿದ್ದಾರೆ.

ಡಾ. ಬದ್ರಿ ಪ್ರಸಾದ್ ಪಾಂಚೋಲಿ ಅವರು ಶಿಕ್ಷಣ ತಜ್ಞರು, ಕವಿ, ನಾಟಕಕಾರರು, ಪತ್ರಕರ್ತರು, ಭಾಷಾ ವಿಜ್ಞಾನಿಯಾಗಿ ಮತ್ತು ಸಾಮಾಜಿಕ ಚಿಂತಕರಾಗಿದ್ದಾರೆ, ಶಿಕ್ಷಣ ಕ್ಷೇತ್ರದಲ್ಲಿ ಅವರು ನೀಡಿದ ಅತ್ಯುತ್ತಮ ಕೊಡುಗೆಗಾಗಿ ವಿವಿಧ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳಿಂದ ಅವರಿಗೆ ಪ್ರಶಸ್ತಿ ಲಭಿಸಿವೆ. ಅವರು ಇತ್ತೀಚೆಗೆ ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಿಂದ ದೀನದಯಾಳ್ ಉಪಾಧ್ಯಾಯ, ಹಿಂದಿ ಸೇವಾ ಸಮ್ಮಾನ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಶ್ರೀಮತಿ ರೇಣು ದಾಂಡೇಕರ್ ಅವರು ಲೋಕಮಾನ್ಯ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್, ಚಿಖಲ್ ಗಾಂವ್ ಅಧ್ಯಕ್ಷರಾಗಿದ್ದಾರೆ. ಒಬ್ಬ ಸಮೃದ್ಧ ಬರಹಗಾರರು, ಸಮಾಜ ಸೇವಕಿ ಮತ್ತು ಚಾಣಾಕ್ಷ ಶಿಕ್ಷಕರಾಗಿದ್ದು, ಶ್ರೀಮತಿ ದಾಂಡೇಕರ್ ಅವರು ಶಿಕ್ಷಣ ಮತ್ತು ಸಾಮಾಜಿಕ ಕಾರ್ಯ ಕ್ಷೇತ್ರದಲ್ಲಿ ಅವರ ಅತ್ಯುತ್ತಮ ಕೊಡುಗೆಗಾಗಿ ಹಲವಾರು ಸಂಸ್ಥೆಗಳಿಗೆ ಗೌರವ ಮತ್ತು ಪ್ರಶಸ್ತಿಯನ್ನು ಪಡೆದಿದ್ದಾರೆ.

ಭಗವದ್ಗೀತೆಯ ಕುರಿತು ತಂತ್ರಜ್ಞಾನ ಮತ್ತು ಸಂಶೋಧನೆಗಳನ್ನು ಜನಪ್ರಿಯಗೊಳಿಸುವುದಕ್ಕೆ ಹೆಸರುವಾಸಿಯಾದ ಸ್ವಾಮಿ ಜ್ಞಾನಾನಂದ ಜಿ ಮಹಾರಾಜ್ ಅವರು ಸಭಿಕರನ್ನು ಮತ್ತು ಶಿಕ್ಷಾ ಭೂಷಣ ಪ್ರಶಸ್ತಿ ಪುರಸ್ಕೃತರನ್ನು ಆಶೀರ್ವದಿಸಿದರು. ಜ್ಞಾನಾನಂದ ಜಿ ಮಹಾರಾಜ್ ಅವರು ನಮ್ಮ ವೈಯಕ್ತಿಕ ಜೀವನದಲ್ಲಿ ಶುದ್ಧತೆಯನ್ನು ತರಬೇಕೆಂದು ಹೇಳಿದರು ಮತ್ತು ಆಧ್ಯಾತ್ಮಿಕ ಮತ್ತು ನೈತಿಕ ಬೆಳವಣಿಗೆಗಾಗಿ ಪ್ರಸ್ತುತ ಯುಗದಲ್ಲಿ ನಾವೆಲ್ಲ ಪ್ರಯತ್ನಿಸಬೇಕೆಂದು ಕೇಳಿಕೊಂಡರು.

ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿ ಮಾತನಾಡಿದ ಹಿಮಾಚಲ ಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀಯುತ ಜೈರಾಮ್ ಠಾಕೂರ್‌ರವರು, ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಕಲಿಸುವುದು ಮಾತ್ರವಲ್ಲದೆ ಸಮಾಜ ಸುಧಾರಣೆಗಳನ್ನು ತರುವಲ್ಲಿ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಾರೆ ಎಂದು ಹೇಳಿದರು. ಶಿಕ್ಷಣ ಕ್ಷೇತ್ರದಲ್ಲಿ ಅನುಕರಣೀಯ ಸಾಧನೆಗಾಗಿ "ಶಿಕ್ಷಾ ಭೂಷಣ" ಪ್ರಶಸ್ತಿ ಪುರಸ್ಕೃತರನ್ನು ಅವರು ಶ್ಲಾಘಿಸಿದರು.

ಪ್ರಸ್ತುತ ಯುಗದಲ್ಲಿ ಪ್ರತಿಯೊಬ್ಬರೂ ಶಿಕ್ಷಣದ ಆಧುನೀಕರಣಕ್ಕೆ ಒತ್ತು ನೀಡುತ್ತಿದ್ದಾರೆ, ಆದರೆ ಅವರಾರು ಹಿಂದಿನ ಇತಿಹಾಸದಿಂದ ಏನನ್ನು ಕಲಿಯುತ್ತಿಲ್ಲ. ನಮ್ಮ ಭವಿಷ್ಯಕ್ಕಾಗಿ ಬಲವಾದ ಅಡಿಪಾಯವನ್ನು ನಿರ್ಮಿಸಲು ನಾವು ನಮ್ಮ ಹೆಮ್ಮೆಯ ಇತಿಹಾಸದಿಂದ ಕಲಿಯಬೇಕಾಗಿದೆ ಎಂದು ಅವರು ಹೇಳಿದರು.

ಭಾರತದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಉನ್ನತಿ ಮತ್ತು ಸುಧಾರಣೆಗಳಿಗಾಗಿ ಕೆಲಸ ಮಾಡುತ್ತಿರುವ ABRSM ನ ಪಾತ್ರವನ್ನು ಶ್ಲಾಘಿಸಿದರು. ಎಬಿಆರ್‌ಎಸ್‌ಎಂ ಶಿಕ್ಷಣ ವ್ಯವಸ್ಥೆಯನ್ನು ಅರ್ಥಪೂರ್ಣಗೊಳಿಸಲು ಪ್ರಯತ್ನಿಸುತ್ತಿದೆ ಮತ್ತು ನೀತಿ ನಿರೂಪಣೆಯಲ್ಲಿ ಸರ್ಕಾರಗಳಿಗೆ ನಿಜವಾದ ಸಲಹೆಗಳನ್ನು ನೀಡುತ್ತದೆ ಎಂದು ಹಿಮಾಚಲ ಪ್ರದೇಶದ ಮುಖ್ಯಮಂತ್ರಿಗಳು ಹೇಳಿದರು.

ಸ್ವಾಮಿ ಜ್ಞಾನಾನಂದ ಜೀ ಮಹಾರಾಜರ ಸಾಂಪ್ರದಾಯಿಕ ದೀಪ ಬೆಳಗಿಸುವುದರೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು ಮತ್ತು ಮುಖ್ಯ ಅತಿಥಿ ಶ್ರೀ ಜೈರಾಮ್ ಠಾಕೂರ್, ABRSM ನ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಮಹೇಂದ್ರ ಕಪೂರ್ ಅವರು ತಮ್ಮ ಸ್ವಾಗತ ಭಾಷಣದಲ್ಲಿ ABRSM ನ ವಿವಿಧ ಚಟುವಟಿಕೆಗಳು ಮತ್ತು "ಶಿಕ್ಷಾ ಭೂಷಣ" ಪ್ರಶಸ್ತಿಯ ಹಿಂದಿನ ಮುಖ್ಯ ಉದ್ದೇಶದ ಕುರಿತು ಮಾತನಾಡಿದರು.

ABRSM ನ ರಾಷ್ಟ್ರೀಯ ಅಧ್ಯಕ್ಷರಾದ ಪ್ರೊ. ಜೆ.ಪಿ ಸಿಂಘಾಲ್ ಅವರು ABRSM ನ ಚಟುವಟಿಕೆಗಳನ್ನು ಮತ್ತು ಅದರ ಸಾಂಸ್ಕೃತಿಕ ಪರಂಪರೆ ಮತ್ತು ಹೆಮ್ಮೆಯೊಂದಿಗೆ ಅಂತಿಮವಾಗಿ ಭಾರತೀಯರನ್ನು ಸಂಪರ್ಕಿಸುವ ಗುಣಮಟ್ಟದ ಶಿಕ್ಷಣವನ್ನು ತರುವಲ್ಲಿ ಅದರ ಧ್ಯೇಯವನ್ನು ಅವರು ತಿಳಿಸಿದರು.

ಸಮಾಜದಲ್ಲಿ ಸರ್ವಾಂಗೀಣ ಬದಲಾವಣೆ ತರುವ ಪ್ರಮುಖ ವ್ಯಕ್ತಿಗಳು ಶಿಕ್ಷಕರು ಎಂದು ಹೇಳಿದರು. ಕಾರ್ಯಕ್ರಮವನ್ನು ಡಾ. ನಾರಾಯಣ್ ಲಾಲ್ ಗುಪ್ತಾ ನಡೆಸಿಕೊಟ್ಟರು ಮತ್ತು

ಪುಟ 9 ಕ್ಕೆ ➤

➢ ಪುಟ 6 ರಿಂದ.....

ಜೊತೆಯಲ್ಲಿ ಆಧುನಿಕ ತಂತ್ರಜ್ಞಾನ ಆಧಾರಿತ ಇರಬೇಕು ಎನ್ನವುದು ನಿಪುಣ ಭಾರತ ಮಿಷನ್‌ನ ಉದ್ದೇಶವಾಗಿದೆ. ಅದಕ್ಕಾಗಿ ಕರ್ನಾಟಕದಲ್ಲಿ ತಯಾರಿ ನಡೆಯುತ್ತಿದೆ. ಈಗಾಗಲೇ ಶಿಕ್ಷಕರಿಗೆ ಎರಡು ಹಂತದಲ್ಲಿ ತರಬೇತಿಯಾಗಿದ್ದು, ಅದಕ್ಕಾಗಿ ಸಾಹಿತ್ಯ ರಚನೆ ಮಾತ್ರ ಮಾಡಲ್‌ಗಳನ್ನು ರಚಿಸುವ ಕಾಯಕ ನಡೆಯುತ್ತಿದೆ.

NEP–2020 ರಲ್ಲಿ Foundational Literacy and Numeracy ಮಗುವಿನ ಬುನಾದಿಹಂತದಲ್ಲಿ ಯಶಸ್ವಿ ಕಲಿಕೆಗೆ ತುಂಬಾ ಅವಶ್ಯಕವಾದ ಅಂಶವಾಗಿದೆ. ಇದರ ಯಶಸ್ಸಿಗೆ ವಿದ್ಯಾರ್ಥಿ ಮತ್ತು ಅವಶ್ಯವಾದ ಶಿಕ್ಷಕರ ಪಾತ್ರ ಎಷ್ಟಿದೆಯೋ, ಅಷ್ಟೇ ಸಹಕಾರ ಪಾಲಕರಿಂದ ಮತ್ತು ಸಮುದಾಯದಿಂದ ಅವಶ್ಯವಿದೆ. ಎಲ್ಲರ ಸಹಕಾರದಿಂದ NEP–2020 ಯಲ್ಲಿ ಬರುವ ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯೆ ಜ್ಞಾನದ ಕಲಿಕೆಯ ಆಶಯ ಈಡೇರುವುದೆನ್ನುವ ಭರವಸೆಯೊಂದಿಗೆ ಲೇಖನ ಮುಗಿಸುವೆ. ಮುಂದಿನ ತಿಂಗಳು ಮತ್ತೊಂದು ಅಂಶದೊಂದಿಗೆ ನಾವು ನೀವು ಒಟ್ಟುಗೂಡೋಣ. ●

➢ ಪುಟ 8 ರಿಂದ.....

ವಂದನಾರ್ಪಣೆಯನ್ನು ಪವನ್ ಮಿಶ್ರಾ ಸಲ್ಲಿಸಿದರು. ದೇಶದ ವಿವಿಧ ರಾಜ್ಯಗಳ ಶಿಕ್ಷಕರ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಹಿಮಾಚಲ ಪ್ರದೇಶ ಶಿಕ್ಷಕ ಮಹಾಸಂಘ ಸಂಘಟಿಸಿತ್ತು.

## ಎಬಿಆರ್‌ಎಸ್‌ಎಮ್‌ನ ಕೇಂದ್ರೀಯ ಕಾರ್ಯಕರ್ತ ಬೈಠಕ್

ಶಿಮ್ಲಾದ ಕುಫ್ರಿಯಲ್ಲಿ ದಿನಾಂಕ 17.12.2021 ರಂದು 18.12.2021 ರಂದು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಕೇಂದ್ರಿಯ ಕಾರ್ಯಕರ್ತ ಬೈಠಕ್ ನಡೆಯಿತು. ದೇಶದ ವಿವಿಧ ಭಾಗಗಳಿಂದ ಎಬಿಆರ್‌ಎಸ್‌ಎಮ್ ನ ಅಖಿಲ ಭಾರತೀಯ ಪದಾಧಿಕಾರಿಗಳು ಭಾಗವಹಿಸಿದ್ದರು. ಎರಡು ದಿನ ನಡೆದ ಬೈಠಕ್‌ನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶ್ರೀಯುತ ಸುನೀಲ್ ಬಾಯಿ ಮೆಹೆತಾಜೀ ಅವರು ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು. ಮಹಾಸಂಘದ ಯೋಜನೆಗಳ ಬಗ್ಗೆ, ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಯಿತು. ಈ ಕೇಂದ್ರಿಯ ಕಾರ್ಯಕರ್ತ ಬೈಠಕ್‌ನಲ್ಲಿ ಎಬಿಆರ್‌ಎಸ್‌ಎಮ್ ನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಾನಂದ ಸಿಂಧನಕೇರಾರವರು ಮತ್ತು ಮಹಿಳಾ ವಿಭಾಗದ ಕಾರ್ಯದರ್ಶಿಗಳಾದ ಶ್ರೀಮತಿ ಮಮತಾ ಡಿ.ಕೆ ರವರು ಕರ್ನಾಟಕದಿಂದ ಭಾಗವಹಿಸಿದ್ದರು.

# ಪ್ರೇಮವೇ ದೇವರು

ಪರಮ ಜ್ಞಾನಿಯಾದ ಪಂಡಿತ ರಘುನಾಥ ಪರಚುರೆ ಅವರು ದೇವರ ಹುಡುಕಾಟದಲ್ಲಿ ಒಮ್ಮೆ ಹಿಮಾಲಯದ ತಪ್ಪಲಿಗೆ ಬಂದರು. ಗಂಗೆಯ ದಡದ ಆಶ್ರಮದಲ್ಲಿದ್ದ ಮಹಾಯೋಗಿ ಆಚಾರ್ಯ ಸತ್ಯವ್ರತರನ್ನು ಭೇಟಿ ಮಾಡಿ 'ಆಚಾರ್ಯವರ, ನನ್ನ ಹೆಸರು ಮಹಾಮಹೋಪಾಧ್ಯಾಯ ಮಹಾಪಂಡಿತ ರಘುನಾಥ ಪರಚುರೆಶಾಸ್ತ್ರಿ ವಿದ್ಯಾವಾಚಸ್ಪತಿ ವಿದ್ಯಾವಾರಿಧಿ' ಎಂದು ತಮ್ಮನ್ನು ಪರಿಚಯಿಸಿಕೊಂಡರು. ಯೋಗಿ ಸತ್ಯವ್ರತರು 'ಮಗು, ರಘುನಾಥ, ಜ್ಞಾನವಾದರೋ ಮನುಷ್ಯನನ್ನು ಹಗುರವಾಗಿಸುತ್ತದೆ. ಆದರೆ ನಿಮ್ಮ ಜ್ಞಾನ ನಿಮ್ಮನ್ನು ಭಾರಹೊರುವವ (ಕತ್ತೆ) ನನ್ನಾಗಿಸಿದೆಯಲ್ಲ' ಎಂದರು. ಅವರ ಮಾತು ರಘುನಾಥರ ಪದವಿ ಪದಕಗಳತ್ತ ಸಂಕೇತಿಸುತ್ತಿತ್ತು. ಶಾಸ್ತ್ರಿಗಳು 'ಆಚಾರ್ಯರೇ, ದೇವರನ್ನು ಪಡೆಯಲು ನಾನೇನು ಮಾಡಬೇಕು ಹೇಳಿ ಎಂದು ಕೇಳಿದರು.

"ಎಲ್ಲದಕ್ಕೂ ಮೊದಲು ಈ ಭಾರವನ್ನು ಇಳಿಸಿ ಪಕ್ಕಕ್ಕಿಡು" ಎನ್ನುತ್ತಾ ಆಚಾರ್ಯರು ಪಂಡಿತರನ್ನು ಕುರಿತು 'ನಿನ್ನ ಕಾಲುಗಳು ಎಂದಾದರೂ ಪ್ರೇಮದ ದಾರಿಯಲ್ಲಿ ನಡೆದಿವೆಯೇ? ಎಂದು ಕೇಳಿದರು. ಪಂಡಿತ ರಘುನಾಥರು ಹೌಹಾರಿದರು. ಮುಂದುವರಿಸಿದ ಆಚಾರ್ಯರು "ದೇವರನ್ನು ಬಿಡಿ, ಪ್ರೇಮವನ್ನು ಪಡೆಯಿರಿ; ಮಂದಿರವನ್ನು ಮರೆತುಬಿಡಿ ಹೃದಯವನ್ನು ತೆರೆದಿಡಿ; ಏಕೆ ಗೊತ್ತೇನು? ದೇವರು ಇರುವುದೇ ಅಲ್ಲಿ! ಅದಕ್ಕಾಗಿ ನೀವು ಪ್ರೇಮಮಂದಿರವನ್ನು ಮೊದಲು ಪ್ರವೇಶಿಸಿ, ಪ್ರೇಮವನ್ನು ಬದುಕಿ, ಅದನ್ನು ತಿಳಿಯಿರಿ. ಆಮೇಲೆ ಬನ್ನಿ, ನಾನು ನಿಮ್ಮನ್ನು ದೇವರ ಬಳಿ ಖಂಡಿತಾ ಕರೆದೊಯ್ಯುತ್ತೇನೆ" ಎಂದರು.

ಪಂಡಿತ ರಘುನಾಥರು ಆಚಾರ್ಯರ ಈ ಮಾತಿನಿಂದ ಇನ್ನಿಲ್ಲದಷ್ಟು ಪ್ರಭಾವಿತರಾದರು. ಅವರು ತಮ್ಮ ಜ್ಞಾನದ ಗಂಟನ್ನು ಅಲ್ಲೇ ಬಿಟ್ಟು ಬಂದರು( ತಾನೇ ಭಾರೀ ಕಲಿತವನೆಂಬ ಅಹಂಕಾರ ಬಿಟ್ಟು ಬಂದರು). ಈ ಘಟನೆ ನಡೆದು ಹಲವು ವರ್ಷಗಳೇ ಕಳೆದವು.

ಇತ್ತ ಆಚಾರ್ಯರು ಮುದುಕರಾದರು. ಪಂಡಿತ ರಘುನಾಥರು ಬರುವರೆಂದು ಕಾಯುತ್ತಲೇ ಇದ್ದರು. ಅವರು ಬಾರದಿದ್ದಾಗ ಕೊನೆಗೆ ತಾವೇ ಅವರನ್ನು ಹುಡುಕುತ್ತಾ ಹೊರಟರು. ಕೆಲದಿನಗಳ ನಂತರ ಕುಷ್ಠರೋಗಿಯೋರ್ವನ ಸೇವೆಯಲ್ಲಿ ತಲ್ಲೀನರಾಗಿದ್ದ ಪಂಡಿತರು ಸಿಕ್ಕರು. 'ಮತ್ತೇಕೆ ಬರಲಿಲ್ಲ' ದೇವರನ್ನು ಕಾಣುವ ಆಸೆಯಲ್ಲವೇ?' ಯೋಗಿಗಳು ಪ್ರಶ್ನಿಸಿದರು.

'ಪ್ರೇಮದ ಅನುಭೂತಿ ಪಡೆದ ಕ್ಷಣದಿಂದಲೇ ಎಲ್ಲ ಪ್ರಾಣಿಗಳಲ್ಲೂ ನಾನು ಭಗವಂತನನ್ನೇ ಕಾಣುತ್ತಿದ್ದೇನೆ. ಪ್ರೇಮವೇ ಭಗವಂತ ಎಂಬುದು ನನಗೆ ಚೆನ್ನಾಗಿ ಮನವರಿಕೆಯಾಗಿದೆ' ಪಂಡಿತ ರಘುನಾಥರ ಈ ಉತ್ತರ ಅರ್ಥಪೂರ್ಣವಾಗಿತ್ತು. ●

- **ಒಮ್ಮೆ ಅವನ ಪವಿತ್ರನಾಮದ ಶಕ್ತಿಯಲ್ಲಿ ನಂಬಿಕೆ ಹುಟ್ಟಿ ಅದನ್ನು ಪದೇ ಪದೇ ಉಚ್ಚರಿಸುವುದಕ್ಕೆ ಮನಸ್ಸಾದ ಮೇಲೆ ಭಕ್ತಿ, ವಿವೇಕ, ಸಾಧನೆಗಳಾವುವೂ ಅವಶ್ಯಕವಿಲ್ಲ. ಸಂಶಯ ಮಾಯವಾಗುವುದು. ಅವನ ನಾಮದ ಬಲದಿಂದ ದೇವರನ್ನೇ ಹೊಂದುವನು.**
- **ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದರು ಹೇಳುತ್ತಾರೆ. 'ನೋಡು, ನೀನು ಭಜನೆ ಮತ್ತು ಸಂಗೀತವನ್ನು ಪ್ರೀತಿಸಬೇಕು. ಸಂಗೀತದ ಮೂಲಕವೂ ಭಗವಂತನನ್ನು ಸೇರಬಹುದು ಎಂಬುದನ್ನು ನೀನು ಎಂದೆಂದಿಗೂ ಮನಸ್ಸಿನಲ್ಲಿಟ್ಟುಕೋ. ಸಂಗೀತವು 'ಶಬ್ದಬ್ರಹ್ಮ'ವೇ ಆಗಿದೆ. ಒಬ್ಬ ವ್ಯಕ್ತಿ ಧ್ಯಾನದ ಮೂಲಕ ಇದನ್ನು ಅನುಭವಿಸುತ್ತಾನೆ.**

**– ಶ್ರೀರಾಮಕೃಷ್ಣರು**

## ವಿದ್ಯಾರ್ಥಿ ಜ್ಞಾನ ಮಿತ್ರ

# ಭಾರತ ಪರಿಚಯ

**ಜೆ. ಎಂ. ಜೋಶಿ**
**ರಾಜ್ಯ ಕೋಶಾಧ್ಯಕ್ಷರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



"ನಾವು ಭಾರತದ ಬಗ್ಗೆ, ಭಾರತವೊಂದರ ಬಗ್ಗೆ ಮಾತ್ರ ಚಿಂತಿಸಬೇಕು. ನಾನು ಹುಟ್ಟು ಆಶಾವಾದಿ, ಎಂದಿಗೂ ಸೋಲೊಪ್ಪಲಾರೆ. ನನ್ನ ನಿಷ್ಠೆ ಇರುವುದು ಭಾರತಕ್ಕೆ ಮಾತ್ರ" ಎಂದು ತಿಳಿಸಿದ ಯುವಕರ ಸ್ಫೂರ್ತಿಯ ಸೆಲೆ ನೇತಾಜಿ ಸುಭಾಷ್‌ಚಂದ್ರಬೋಸ್.

ಸುಭಾಷ್‌ರು, ರಾಯ್ ಬಹದ್ದೂರ್ ಜಾನಕೀನಾಥ್ ಬೋಸ್ ಮತ್ತು ಪ್ರಭಾವತಿ ಬೋಸ್‌ರ ಕಿರಿಯ ಮಗ. ಅತ್ಯಂತ ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದ ಸುಭಾಷ್ ವಿದ್ಯಾಭ್ಯಾಸದಲ್ಲಿ ತುಂಬಾ ಚುರುಕಾಗಿದ್ದರು. ಎಂ.ಎ ಮತ್ತು ಐ.ಸಿ.ಎಸ್ ಪರೀಕ್ಷೆಯಲ್ಲಿ ಉನ್ನತ ಶ್ರೇಣಿ ಪಡೆದರು. ಬ್ರಿಟಿಷರ ದಾಸ್ಯದಿಂದ ಭಾರತವನ್ನು ಸ್ವತಂತ್ರಗೊಳಿಸುವ ಸದುದ್ದೇಶದಿಂದ ಮಹಾತ್ಮಗಾಂಧೀಜಿಯವರನ್ನು ಭೇಟಿ ಮಾಡಿದರು. ಗಾಂಧಿಜೀಯವರು ಆಗಲೇ ಅಹಿಂಸಾತ್ಮಕ ಅಸಹಕಾರ ಚಳುವಳಿ ಆರಂಭಿಸಿದ್ದರು. ತರುಣ ಸುಭಾಷ್ ಅಸಹಕಾರ ಆಂದೋಲನದ ಮೂಲಕ ಬ್ರಿಟಿಷರ ಪ್ರಭುತ್ವನ್ನು ಕೊನೆಗಾಣಿಸಲು ಸಾಧ್ಯವಿಲ್ಲವೆಂದು ಮನಗಂಡರು.

ಸುಭಾಷರು ಹಲವು ಸಾರ್ವಜನಿಕ ಭಾಷಣದಲ್ಲಿ "ನಮ್ಮ ಭಾರತ ಬ್ರಿಟಿಷರ ಪೀಡೆಯಿಂದ ಮುಕ್ತವಾಗಬೇಕು. ಪೂರ್ಣ ಸ್ವಾತಂತ್ರ್ಯವೇ ನಮ್ಮ ಗುರಿ" ಎಂದು ದೇಶವಾಸಿಗಳನ್ನು ಹುರಿದುಂಬಿಸುತ್ತಿದ್ದರು. 1942ರ ಡಿಸೆಂಬರ್‌ನಲ್ಲಿ ನೇತಾಜಿ ಸ್ವಾತಂತ್ರ್ಯಕ್ಕಾಗಿ ಅಪ್ರತಿಮ ದೇಶ ಭಕ್ತರ ಸೈನ್ಯವಾದ ಆಜಾದ್‌ಹಿಂದ್ ಫೌಜ್ ಪ್ರಾರಂಭಿಸಿದರು. ಹೋರಾಟಕ್ಕಾಗಿ ಅತಿ ಕಡಿಮೆ ಕಾಲಾವಧಿಯಲ್ಲಿ 3500 ಸೈನಿಕರನ್ನು ಸಿದ್ಧಗೊಳಿಸಿದರು. ನೇತಾಜಿ ಮಲಯ, ಥೈಲ್ಯಾಂಡ್, ಬರ್ಲಿನ್, ಫ್ರೆಂಚ್ ಮುಂತಾದ ದೇಶಗಳಿಗೆ ಭೇಟಿ ನೀಡಿ ಭಾರತೀಯರನ್ನು ಕಂಡು "ಏಳಿ! ಸಮರ ಸನ್ನದ್ಧರಾಗಿ, ಭಾರತವನ್ನು ಬಂಧನದಿಂದ ಬಿಡಿಸಿ" ಎಂದು ಕರೆನೀಡಿದರು.

1945 ಆಗಸ್ಟ್ 18ರಂದು ಬೋಸರು ವಿಮಾನ ಅಪಘಾತದಲ್ಲಿ ವೀರಮರಣವನ್ನು ಅಪ್ಪಿದರೆಂದು ಟೋಕಿಯೋ ರೇಡಿಯೋ ಪ್ರಕಟಿಸಿತು. ಈ ಸುದ್ದಿಯನ್ನು ಕೇಳಿದ ಭಾರತೀಯರಿಗೆ ಪರಮಾಶ್ಚರ್ಯವಾಯಿತು. ನೇತಾಜಿಯವರ ಉಸಿರು ಭಾರತವಾಗಿತ್ತು. ಭಾರತದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ತ್ಯಾಗ ಮಾಡಿದರು. ಅವರು ಯಾವಾಗಲೂ ಚಿರಂಜೀವಿ.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಒಂದಿಷ್ಟು ಇತಿಹಾಸ

1. "ಏಳಿ ಎದ್ದೇಳಿ ಎಚ್ಚರಗೊಳ್ಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂದು ಎಚ್ಚರಿಸಿದ ವೀರ ಸನ್ಯಾಸಿ ಯಾರು?
2. ಆಡಳಿತದಲ್ಲಿ ಪಂಚ ಪ್ರಧಾನರನ್ನು ಹೊಂದಿದ್ದ ರಾಜಮನೆತನ ಯಾವುದು?
3. ಸ್ವಾತಂತ್ರ್ಯ ಸೇನಾನಿ ಸುಭಾಷ್‌ಚಂದ್ರ ಬೋಸ್‌ರು ಸ್ಥಾಪಿಸಿದ ಸೇನೆಯ ಹೆಸರೇನು?
4. ಕರ್ನಾಟಕವನ್ನು ರಾಮಾಯಣ ಕಾಲದಲ್ಲಿ ಯಾವ ಪ್ರದೇಶವೆಂದು ಕರೆಯುತ್ತಿದ್ದರು?
5. ಶಿವಾಜಿಯಿಂದ ವೀರಪರಾಕ್ರಮ ಎಂಬ ಗೌರವ ಪಡೆದ ಕನ್ನಡದ ರಾಣಿ ಯಾರು?

## ಜ್ಞಾನ ವಿಜ್ಞಾನ

1. ಕನ್ನಡ ಸಾಹಿತ್ಯ ಪರಿಷತ್‌ನ ಈಗಿನ ಅಧ್ಯಕ್ಷರು ಯಾರು?
2. ಟೆಸ್ಟ್ ಕ್ರಿಕೆಟ್‌ನಲ್ಲಿ 500 ವಿಕೆಟ್ ಪಡೆದ ಪ್ರಥಮ ಭಾರತೀಯ ಮತ್ತು ಕನ್ನಡಿಗನ ಹೆಸರೇನು?
3. ನಾವು ಗಣರಾಜ್ಯದಿನವನ್ನು ಯಾವ ದಿನದಂದು ಆಚರಿಸುತ್ತೇವೆ?
4. ಹಸಿರು ಮನೆ ಪರಿಣಾಮವನ್ನುಂಟು ಮಾಡುವ ಅನಿಲ ಯಾವುದು?
5. ವಾಹನಗಳ ಹಿನ್ನೋಟಕ್ಕಾಗಿ ಯಾವ ದರ್ಪಣ ಬಳಸುವರು?

## ಡಿಸೆಂಬರ್ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ವಿಜಯನಗರ ಅರಸರು ಮತ್ತು ಬಹುಮನಿ ಸುಲ್ತಾನರು
2. ಕೆಂಗಲ್ ಹನುಮಂತಯ್ಯ
3. ಶ್ರೀಕೃಷ್ಣ
4. ಕದಂಬ
5. ತಿಮ್ಮಣ್ಣ ನಾಯಕ

**ಜ್ಞಾನ–ವಿಜ್ಞಾನ – ಉತ್ತರಗಳು**

1. ಚಿನ್ನಸ್ವಾಮಿ ಕ್ರೀಡಾಂಗಣ
2. ಕರ್ನಾಟಕ
3. ಸರ್ ಸಿ.ವಿ ರಾಮನ್
4. ಪ್ಲಾಟಿನಂ
5. ಸೋಡಿಯಂ ಕಾರ್ಬೋನೇಟ್

# “ನನ್ನ ಶಾಲೆ ನನ್ನ ತೀರ್ಥಕ್ಷೇತ್ರ”

## ಸ್ವಾತಂತ್ರ್ಯ ಅಮೃತಮಹೋತ್ಸವದ ನಿಮಿತ್ತ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.)ವು ರಾಜ್ಯದಲ್ಲಿ ಸ್ವಾತಂತ್ರ್ಯ ಅಮೃತಮಹೋತ್ಸವದ ನಿಮಿತ್ತ 75 ಶಾಲೆಗಳನ್ನು ಈ ಸೇವಾಕಾರ್ಯಕ್ಕಾಗಿ ರಾಜ್ಯದ 30 ಜಿಲ್ಲೆಗಳಲ್ಲಿ 60 ತಾಲ್ಲೂಕುಗಳಿಂದ 75 ಶಾಲೆಗಳನ್ನು ಆಯ್ಕೆಮಾಡಿಕೊಂಡಿದೆ. 15 ಆಗಸ್ಟ್ 2021ರಿಂದ 15 ಆಗಸ್ಟ್ 2022 ರ ಮಧ್ಯದ ಅವಧಿಯಲ್ಲಿ ಈ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಒಂದು ಮಾದರಿ ಶಾಲೆ ಆಗುವ ಹಾಗೆ ಯೋಜನೆ ರೂಪಿಸುವುದು ಪ್ರಮುಖ ಉದ್ದೇಶ. ಈ ರೀತಿಯಾಗಿ ಆಯ್ಕೆಯಾಗಿರುವ ಶಾಲೆಗೂ ಸ್ವಾತಂತ್ರ್ಯ ಚಟುವಟಿಕೆಯಲ್ಲಿ ಭಾಗವಹಿಸಿದ, ಇಲ್ಲವೆ ಸಾಮಾಜಿಕ ಕಾರ್ಯದಲ್ಲಿ ತೊಡಗಿದ ವ್ಯಕ್ತಿಗಳು ಕಲಿತಿರುವ ಶಾಲೆ ಅಥವಾ ಅವರ ಹುಟ್ಟೂರುಗಳಲ್ಲಿರುವ ಶಾಲೆಗಳನ್ನು ಪರಿಗಣಿಸಿದೆ.




### ಪ್ರತಿ ಶಾಲೆಯಲ್ಲಿ ಮಾಡಬಹುದಾದ ಚಟುವಟಿಕೆಗಳು:

* ಆಟದ ಮೈದಾನದ ಅಭಿವೃದ್ಧಿ– ಆಟದ ಮೈದಾನದ ಸಮತಟ್ಟು ಮಾಡುವುದು, ವಾಲಿಬಾಲ್, ಕಬ್ಬಡಿ, ಕೊಕೊ ಅಂತಹ ಆಟಗಳಿಗೆ ಮೈದಾನ ಸಿದ್ಧಪಡಿಸುವುದು.
* ಕಟ್ಟಡ ರಿಪೇರಿ : ಶಾಲೆಯ ಕೊಠಡಿಗಳನ್ನು ರಿಪೇರಿ ಮಾಡಿಸುವುದು
* ಕಾಪೌಂಡ್ ರಿಪೇರಿ : ಬಿದ್ದು ಹೋಗಿರುವ ಕಾಂಪೌಂಡನ್ನು ರಿಪೇರಿ ಮಾಡಿಸುವುದು, ಮುಳ್ಳುತಂತಿ ಬೇಲಿ ನಿರ್ಮಿಸುವುದು.
* ಕೈತೋಟ ನಿರ್ಮಾಣ : ಅನ್ನದಾಸೋಹಕ್ಕೆ ಪೂರಕವಾಗುವ ಸೊಪ್ಪು, ತರಕಾರಿ, ಜೊತೆಗೆ ಪಪ್ಪಾಯಿ, ನುಗ್ಗೆ ಮರಗಳನ್ನು ಬೆಳೆಸುವುದು.
* ಶಾಲೆಗೆ ಬಣ್ಣ ಹಚ್ಚಿಸುವುದು: ಶಾಲೆಯ ಕೊಠಡಿಗಳಿಗೂ ಮತ್ತು ಕಾಂಪೌಂಡ್‌ಗಳಿಗೂ ಬಣ್ಣ ಹಚ್ಚಿಸುವುದು
* ಶೈಕ್ಷಣಿಕ ಚಿತ್ರ ಬಿಡಿಸುವುದು: ಆ ಶಾಲೆಯಲ್ಲಿಯ ಮಕ್ಕಳಿಗೆ ಪೂರಕವಾದ ಶೈಕ್ಷಣಿಕ ಬರಹ ಮತ್ತು ಚಿತ್ರಗಳನ್ನು ಗೋಡೆ ಮತ್ತು ಕಂಬಗಳ ಮೇಲೆ ಬಿಡಿಸುವುದು.
* ಉದ್ಯಾನವನ ನಿರ್ಮಾಣ: ಶಾಲೆಯ ಸೌಂದರ್ಯ ಹೆಚ್ಚಿಸುವ ದೃಷ್ಟಿಯಿಂದ ಅಲಂಕಾರಿಕ ಗಿಡಗಳ ಮತ್ತು ಹೂಗಿಡಗಳನ್ನು ನೆಡುವುದು. ಅವುಗಳಿಗೆ ಇಟ್ಟಿಗೆಗಳಿಂದ ಅಲಂಕರಿಸಿ ಅದರೊಳಗೆ ಹೂಕುಂಡಗಳನ್ನು ತಂದು ಇಡುವುದು.
* ಮರ ನೆಡುವುದು: ದೊಡ್ಡ ಮರಗಳು ಬೆಳೆಯ ಬಹುದಾದ ಜಾಗ ಇದ್ದಲ್ಲಿ ಕಾಡುನೆಲ್ಲಿ, ತೆಂಗು, ಬೇವು ಇಂತಹ ಮರಗಳನ್ನು ನೆಡುವುದು.
* ಗ್ರಂಥಾಲಯ, ಪ್ರಯೋಗಾಲಯಕ್ಕೆ ಮತ್ತು ಚಟುವಟಿಕೆಗಳಿಗೆ ಪೂರಕವಾದ ವಸ್ತುಗಳನ್ನು ಶಾಲೆಗೆ ಒದಗಿಸುವುದು.

### ಈ ಎಲ್ಲ ಕಾರ್ಯಗಳನ್ನು ಮಾಡುವುದಕ್ಕಾಗಿ ಈ ಕೆಳಗೆ ಪಟ್ಟಿ ಮಾಡಿದವರ ಸಹಕಾರ ಪಡೆಯುವುದು.

- SDMC ಯಿಂದ, ಗ್ರಾಮಪಂಚಾಯತಿ/ ಪಟ್ಟಣ ಪಂಚಾಯತಿ
- ಸ್ಥಳೀಯ ದಾನಿಗಳಿಂದ
- ಸ್ವಯಂಸೇವಾ ಸಂಸ್ಥೆಗಳಿಂದ
- ಆ ಶಾಲೆಯ ಹಿರಿಯ ವಿದ್ಯಾರ್ಥಿಗಳಿಂದ
- ಪಾಲಕರು/ ಶಿಕ್ಷಕರಿಂದ
- ಚಿತ್ರಕಲಾ ಶಿಕ್ಷಕರಿಂದ
- ಅಲ್ಲಿ ಅಸ್ತಿತ್ವದಲ್ಲಿರುವ ಶಿಕ್ಷಕ ಸಂಘಟನೆಗಳಿಂದ

ಇವರೆಲ್ಲರನ್ನು ಒಳಗೊಂಡಿರುವ ಒಂದು ಸಮಿತಿಯನ್ನು ರಚಿಸಬೇಕು. ಈ ಸಮಿತಿಯಲ್ಲಿ ಚರ್ಚಿಸಿ ನಿರ್ಧರಿಸಿದ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು. ಈ ಸಂದರ್ಭದಲ್ಲಿ ಆ ಶಾಲೆಗೆ ತೀರಾ ಅವಶ್ಯವಿರುವ ಕಾರ್ಯಗಳಿಗೆ ಮೊದಲ ಆದ್ಯತೆ ಕೊಡಬೇಕು. ಈ ಕಾರ್ಯಗಳನ್ನು ಕನಿಷ್ಠ 20 ದಿನಗಳ ಮುಂಚೆಯೇ ಯೋಚಿಸಿ ಯೋಜನೆ ತಯಾರಿಸಬೇಕು. ಕಾರ್ಯಕ್ರಮ ದಿನಕ್ಕಿಂತಲೂ ಮೊದಲೇ ಶಾಲೆಗೆ ಬಣ್ಣ ಹಚ್ಚುವುದು. ಮೈದಾನ ಸಮತಟ್ಟು ಮಾಡುವುದು ಹಾಗೂ ರಿಪೇರಿಕಾರ್ಯ ಮುಗಿಸಿರಬೇಕು. ಕಾರ್ಯಕ್ರಮ ದಿನದಂದು ಗೋಡೆ ಬರಹ, ಚಿತ್ರ ಬಿಡಿಸುವುದು ಮತ್ತು ಕೈತೋಟ, ಗಾರ್ಡನ್ ಕಾರ್ಯ ಮಾಡಬೇಕು. ಈ ಕಾರ್ಯಕ್ಕೆ ಕನಿಷ್ಠ 50 ಶಿಕ್ಷಕರ ತಂಡ ಬೆಳಿಗ್ಗೆ 8 ರಿಂದ ಸಂಜೆ 5 ರವರೆಗೂ ತೊಡಗಬೇಕು. ಈ ಕಾರ್ಯದ ದಿನದಂದು ತಾಲ್ಲೂಕು ಮತ್ತು ಜಿಲ್ಲೆಯ ಶೈಕ್ಷಣಿಕ ಅಧಿಕಾರಿಗಳನ್ನು ಮತ್ತು ಮಾಧ್ಯಮದವರನ್ನು ಆಹ್ವಾನಿಸಬೇಕು. ಸ್ಥಳೀಯವಾಗಿಯೂ ಅದಕ್ಕೆ ಅವಶ್ಯವಿರುವ ಎಲ್ಲ ವಸ್ತುಗಳನ್ನು ಸಂಗ್ರಹಿಸಬೇಕು ಮತ್ತು ಮುಂದಿನ ದಿನಗಳಲ್ಲಿ ಅವುಗಳ ರಕ್ಷಣೆಗಾಗಿ ಸ್ಥಳೀಯ ವ್ಯಕ್ತಿಗಳೂ ಮತ್ತು ಎಸ್‌ಡಿಎಂಸಿಯವರಿಗೆ ಜವಾಬ್ದಾರಿಯನ್ನು ನೀಡಬೇಕು.

ಈ ತೆರನಾದ ಸೇವಾಕಾರ್ಯವು ದೇಶದಲ್ಲಿ ಎಬಿಆರ್‌ಎಸ್‌ಎಂನ ನಿರ್ದೇಶನದಂತೆ ದೇಶದ ಅನೇಕ ರಾಜ್ಯದಲ್ಲಿ ನಡೆಯುತ್ತಿದೆ. ನಮ್ಮ ರಾಜ್ಯದಲ್ಲಿ ಆಗಸ್ಟ್ 2022ರವರೆಗೆ ಕಾಯದೆ ಏಪ್ರಿಲ್– ಮೇ ತಿಂಗಳಲ್ಲಿ ಬಹುತೇಕ ನಾವು ಗುರುತಿಸಿದ 75 ಶಾಲೆಗಳಲ್ಲಿ ಯೋಜನೆ ಕಾರ್ಯರೂಪಕ್ಕೆ ತರುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವ ಅವಕಾಶ ನಮಗಿಲ್ಲ. ಆದರೆ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ನಾವೆಲ್ಲರೂ ಈ ಕಾರ್ಯದಲ್ಲಿ ಭಾಗವಹಿಸಿ ಸೇವೆ ಸಲ್ಲಿಸಬಹುದಲ್ಲವೆ?

**ಚಿದಾನಂದ ಪಾಟೀಲ್,** ರಾಜ್ಯ ಪ್ರಧಾನ ಕಾರ್ಯದರ್ಶಿ

**ಸಂದೀಪ ಬೂದಿಹಾಳ್,** ರಾಜ್ಯಾಧ್ಯಕ್ಷರು

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-01-2022 Date of Posting 20th or 21st of every month Posted at Periodical Rate

# ಕಾಲೇಜು ಅತಿಥಿ ಉಪನ್ಯಾಸಕರ ಕುರಿತು ರಾಜ್ಯ ಸರ್ಕಾರದಿಂದ ಐತಿಹಾಸಿಕ ನಿರ್ಧಾರ – ಕೆ.ಆರ್.ಎಮ್.ಎಸ್.ಎಸ್. ಸ್ವಾಗತ

ಅತಿಥಿ ಉಪನ್ಯಾಸಕರ ಬಹು ವರ್ಷಗಳ ಸಮಸ್ಯೆಯ ಪರಿಹಾರಕ್ಕಾಗಿ ರಾಜ್ಯಸರ್ಕಾರ ತೆಗೆದುಕೊಂಡ ಐತಿಹಾಸಿಕ ನಿರ್ಧಾರಕ್ಕೆ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ (ಕೆ.ಆರ್.ಎಮ್.ಎಸ್.ಎಸ್.) ಸ್ವಾಗತಿಸುತ್ತದೆ. ಕಳೆದ 20 ವರ್ಷಗಳಿಂದ ಅತಿಥಿ ಉಪನ್ಯಾಸಕರ ಬೇಡಿಕೆಗಳ ಕುರಿತಂತೆ ಕೆ.ಆರ್.ಎಮ್.ಎಸ್.ಎಸ್. ಹಲವಾರು ಬಾರಿ ರಾಜ್ಯದ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಹಾಗೂ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಿಗೆ ಮನವಿ ಮಾಡಿಕೊಂಡಿತ್ತು. ಕಳೆದ ಒಂದು ತಿಂಗಳಿಂದ ಅತಿಥಿ ಉಪನ್ಯಾಸಕರು ತರಗತಿಗಳನ್ನು ಬಹಿಷ್ಕರಿಸಿ ಹೋರಾಟ ಮಾಡುತ್ತಿದ್ದರು. ಈ ಹೋರಾಟಕ್ಕೆ ಕೆ.ಆರ್.ಎಮ್.ಎಸ್.ಎಸ್. ಬೆಂಬಲಕೊಟ್ಟು, ಉನ್ನತ ಶಿಕ್ಷಣ ಸಚಿವರಿಗೆ ನಿಯೋಗದಲ್ಲಿ ತೆರಳಿ ಮನವಿಯನ್ನು ಕೂಡಾ ಸಲ್ಲಿಸಿತ್ತು. ರಾಜ್ಯ ಸರ್ಕಾರ ಈ ಸಮಸ್ಯೆಯ ಪರಿಹಾರಕ್ಕಾಗಿ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಮಿತಿಯನ್ನು ಕೂಡಾ ರಚಿಸಿ, ಧನಾತ್ಮಕವಾಗಿ ಸ್ಪಂದಿಸಿತ್ತು. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣೀಸಿ, ಕಳೆದ 20 ವರ್ಷಗಳ ಸಮಸ್ಯೆಯನ್ನು ಬಗೆಹರಿಸಿದ ರಾಜ್ಯದ ಜನಪ್ರೀಯ ಮುಖ್ಯಮಂತ್ರಿಗಳಾದ ಮಾನ್ಯಶ್ರೀ ಬಸವರಾಜ ಬೊಮ್ಮಾಯಿ ಹಾಗೂ ಶಿಕ್ಷಣ, ಶಿಕ್ಷಕ ಹಾಗೂ ವಿದ್ಯಾರ್ಥಿಸ್ನೇಹಿಗಳಾದ ರಾಜ್ಯದ ಉನ್ನತ ಶಿಕ್ಷಣ ಸಚಿವರಾದ ಮಾನ್ಯಶ್ರೀ ಡಾ: ಸಿ.ಎನ್. ಅಶ್ವತ್ಥ್‌ನಾರಾಯಣ ಅವರಿಗೆ ಕೆ.ಆರ್.ಎಮ್.ಎಸ್.ಎಸ್. ಧನ್ಯವಾದಗಳನ್ನು ಸಮರ್ಪಿಸುತ್ತದೆ.

ಈ ಸಮಸ್ಯೆಯನ್ನು ಪರಿಹರಿಸಲು ಅವಿರತ ಪ್ರಯತ್ನ ಮಾಡಿದ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಅರುಣ ಶಹಾಪೂರ, ಶ್ರೀ ಆಯನೂರು ಮಂಜುನಾಥ, ಶ್ರೀ ಎಸ್.ವಿ. ಸಂಕನೂರ, ಶ್ರೀ ಶಶಿಲ್ ನಮೋಶಿ, ಶ್ರೀ ಹಣಮಂತ ನಿರಾಣಿ, ಶ್ರೀ ಪುಟ್ಟಣ್ಣ, ಶ್ರೀ ವೈ.ಎ. ನಾರಾಯಣಸ್ವಾಮಿ ಹಾಗೂ ರಾಜ್ಯದ ಎಲ್ಲಾ ಪದವೀಧರ ಹಾಗೂ ಶಿಕ್ಷಣ ಕ್ಷೇತ್ರದ ವಿಧಾನ ಪರಿಷತ್ ಸದಸ್ಯರುಗಳಿಗೆ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಕುಮಾರ ನಾಯಕ, ಮತ್ತು ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಾದ ಶ್ರೀ ಪ್ರದೀಪ.ಪಿ ಅವರನ್ನು ಮಹಾವಿದ್ಯಾಲಯ ಶಿಕ್ಷಕ ಸಂಘ ಕೃತಜ್ಞತೆಗಳನ್ನು ಸಮರ್ಪಿಸುತ್ತದೆ.

ರಾಜ್ಯ ಸರ್ಕಾರ ಹೊರಡಿಸಿದ ಆದೇಶ ಪತ್ರದಲ್ಲಿ ಈಗಿರುವ ಕಾರ್ಯಭಾರ 8–10 ನ್ನೂ 15 ಗಂಟೆಗಳಿಗೆ ಹೆಚ್ಚಿಸಿ, 26000/– ರೂ. ಗಳಿಂದ 32000/– ರೂ.ಗಳವರೆಗೆ 4 ಸ್ಥರಗಳಲ್ಲಿ ವೇತನವನ್ನು ಹೆಚ್ಚಿಸಿದ ವಿವರಗಳನ್ನು ತಿಳಿಸಿದೆ. ಅಧ್ಯಾಪಕರುಗಳಿಗೆ ಪೂರ್ಣ ಸಮಯದ ಕಾರ್ಯಭಾರ ಕೊಡುವುದರಿಂದಾಗಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಅನುಕೂಲವಾಗಲಿದೆ. ಉಪನ್ಯಾಸಕರು ಪೂರ್ಣ ಸಮಯ ಕಾಲೇಜುಗಳಲ್ಲಿ ಇರುವುದರಿಂದ ವಿದ್ಯಾರ್ಥಿಗಳಿಗೂ ಇದರ ಲಾಭವಾಗಲಿದೆ.

ಇದೆ ಸಮಯದಲ್ಲಿ ಈ ನಿರ್ಧಾರದಿಂದಾಗಿ ಹಲವಾರು ಅತಿಥಿ ಉಪನ್ಯಾಸಕರು ತಮ್ಮ ಕೆಲಸವನ್ನು ಕಳೆದುಕೊಳ್ಳುವ ಭೀತಿಯು ಇದೆ. ಆ ಕಾರಣಕ್ಕಾಗಿ ಅವರ ಎಲ್ಲರ ಸಮಸ್ಯೆಯನ್ನು ಪರಿಗಣೀಸಿ, ಸೂಕ್ತ ನಿರ್ಧಾರವನ್ನು ತೆಗೆದುಕೊಂಡು ನ್ಯಾಯ ಒದಗಿಸಿಬೇಕೆಂದು ಮಹಾವಿದ್ಯಾಲಯ ಶಿಕ್ಷಕ ಸಂಘ ಒತ್ತಾಯಿಸುತ್ತದೆ. ಅತಿಥಿ ಉಪನ್ಯಾಸಕರ ಸೇವೆಯನ್ನು 10 ತಿಂಗಳ ಬದಲಾಗಿ 12 ತಿಂಗಳೂ ಮುಂದುವರೆಸಿ, 1 ದಿನದ ಸೇವೆಗೆ ಮಾತ್ರ ವಿರಾಮ ಕೊಟ್ಟು ಮತ್ತೆ ನಿಯುಕ್ತಿಗೊಳಿಸಿದರೆ, ಅವರು ಪೂರ್ಣ ಒಂದು ವರ್ಷ ಕಾರ್ಯ ಮಾಡಿದ ಹಾಗೆ ಆಗುತ್ತದೆ. ಸೇವಾ ಭದ್ರತೆಗಾಗಿ ಹೋರಾಟ ಮಾಡಿದ ಅತಿಥಿ ಉಪನ್ಯಾಸಕರಿಗೆ ಭದ್ರತೆಯನ್ನು ಕೊಟ್ಟು, ಅನಿಶ್ಚಿತತೆಯಿಂದ ಮುಕ್ತ ಮಾಡಬೇಕೆಂದು ಕೆ.ಆರ್.ಎಮ್.ಎಸ್.ಎಸ್. ಈ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಹಾಗೂ ಉನ್ನತ ಶಿಕ್ಷಣ ಸಚಿವರಲ್ಲಿ ಮನವಿ ಸಲ್ಲಿಸುತ್ತದೆ.



1987 ರಿಂದ 1995ರ ನಡುವೆ ಆರಂಭವಾಗಿ ಅನುದಾನಕ್ಕೆ ಒಳಪಡಿಸಲು ಬಾಕಿ ಇರುವ ಅನುದಾನ ರಹಿತ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ ಹಾಗೂ 1995 ರ ನಂತರ ಆರಂಭವಾದ ಅನುದಾನ ರಹಿತ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಕುರಿತು, ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿಯಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ತೊಡಕಾಗಿರುವ ಆರ್ಥಿಕ ಮಿತವ್ಯಯದ ಆದೇಶವನ್ನು ಹಿಂಪಡೆಯುವ ಕುರಿತು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಬಿ.ಸಿ ನಾಗೇಶ್ ರವರಿಗೆ ಶಿಕ್ಷಣ ಸಂಕುಲ ವತಿಯಿಂದ ಮನವಿ ಸಲ್ಲಿಸಲಾಯಿತು.



ಕ. ರಾ. ಮಾ. ಶಿ.ಸಂಘದಿಂದ ಹಿಂದಿ ಶಿಕ್ಷಕರಿಗೆ BRP ಮತ್ತು ECO ಹುದ್ದೆಗಳಿಗೆ ಅರ್ಜಿ ಹಾಕಲು ಅನುವು ಮಾಡಿಕೊಡಬೇಕಾಗಿ ರಾಜ್ಯ ಯೋಜನಾ ನಿರ್ದೇಶಕರಿಗೆ ಕೋರಲಾಯಿತು.

**ಜನವರಿ 12, ಸ್ವಾಮಿ ವಿವೇಕಾನಂದರ ಜಯಂತಿಯಿಂದ ಜನವರಿ 23, ಸುಭಾಷ್‌ಚಂದ್ರಬೋಸ್‌ರವರ ಜಯಂತಿಯವರೆಗೆ ಆಚರಿಸುವ ಕರ್ತವ್ಯಬೋಧ ದಿನದ ವರದಿಯನ್ನು ದಿನಾಂಕ 05.02.2022ರೊಳಗೆ ಕೇಂದ್ರ ಕಛೇರಿಯ ಈ–ಮೇಲ್ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.**

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com